

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 261 Tuesday 25-06-2024 E-mail : maruti.b.hosamani76@gmail.com Page: 4 Price : Rs. 1/-

## ಕಾನಾ ಹೊಸಹಳ್ಳಿ ಪೋಲಿಸ್ ಠಾಣೆಯಲ್ಲಿ ದಲಿತ ಸಭೆ

**ಕೆ. ಹೊಸಹಳ್ಳಿ :** ಕಾನಾ ಹೊಸಹಳ್ಳಿ ಪೋಲಿಸ್ ಠಾಣೆಯ ಆವರಣದಲ್ಲಿ ದಲಿತರ ಕುಂದು ಕೊರತೆ ಸಭೆ ಕೂಡ್ಲಿಗಿ ಡಿ.ವೈ. ಎಸ್.ಪಿ ಮಲ್ಲೇಶಪ್ಪ ಮಲ್ಲಾಪುರ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ದಂದು ಜರಗಿ-ತು.

ಹೊಸಹಳ್ಳಿ ಪೊಲೀಸ್ ಠಾಣೆ ಆವರಣದಲ್ಲಿ ಭಾನುವಾರ ಜರುಗಿದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಕುಂದು ಕೊರತೆಗಳ ಸಭೆಯನ್ನು ಉದ್ದೇಶಿಸಿ ಮಾನ್ಯ ಡಿ.ವೈ. ಎಸ್.ಪಿ ಮಲ್ಲೇಶಪ್ಪ ಮಲ್ಲಾಪುರ ಮಾತನಾಡಿ ಪೊಲೀಸ್ ಇಲಾಖೆಯಲ್ಲಿ ಸಮಾನ ನಾಗರಿಕರ ಹಿತ ಶಕ್ತಿಯಿಂದ ಪೊಲೀಸ್ ಬಲವನ್ನು ಬಲಪಡಿಸಲು ಹಲವು ಬಗೆಯ ಹತ್ತಾರು ಯೋಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಯಾವುದೇ ರೀತಿಯಲ್ಲಿ ದಲಿತರಿಗೆ ಅನ್ಯಾಯವಾಗದ ರೀತಿಯಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಪೊಲೀಸ್ ಇಲಾಖೆ ಕಾರ್ಯ ನಿರ್ವಹಿಸುತ್ತದೆ. ದಲಿತರು ತಮ್ಮ ನ್ಯಾಯಯುತ ಬೇಡಿ-ಕೆ ಸಮಸ್ಯೆಗಳ ಇತ್ಯಾರ್ಥಕ್ಕಾಗಿ ತಮ್ಮನ್ನು ಯಾವುದೇ ಸಂದರ್ಭದಲ್ಲಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿ ಕೊಳ್ಳಬಹುದು ಸಂವಿಧಾನ ಕಾನೂನಿನ ಅರಿವು ನೆರವು ಕುರಿತು ಇಂದಿನ



ಯುವಕ ಯುವತಿಯರಲ್ಲಿ ಅರಿವು ಮೂಡಿಸಲು ಅನೇಕ ಕಾನೂನು ಹರಿವು ನೆರವು ಕಾರ್ಯಕ್ರಮ ಮಾಡಲಾಗಿದೆ. ಹೊಸಹಳ್ಳಿಯಲ್ಲಿ ಕೂಡ ಹಿಂದಿನ ವರ್ಷ ಗ್ರಾಪಂ ವತಿಯಿಂದ ಸಂಬಂಧಪಟ್ಟ ನ್ಯಾಯಾಲಯದ ಪೊಲೀಸ್ ಇಲಾಖೆಯ ಸಹ ಯೋಗದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ ಮಾಡಲಾಗಿದೆ. ಈ ಬಾರಿಯೂ ಒಂದು ದಿನಾಂಕ ನಿರ್ಧರಿಸಿ ಕಾರ್ಯಕ್ರಮ ಮಾಡಲಾಗುವುದು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಕೆಲವು ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ, ಯುವಕರು ಐಪಿಎಲ್ ಇನ್ನಿತರ ಗೇಮ್ ಗಳನ್ನು ಮೊಬೈಲಲ್ಲಿ ಆಡಿ ಹಾಳಾಗುತ್ತಿದ್ದಾರೆ ಇದಕ್ಕೆ ಕಡಿವಾಣ ಹಾಕಿ ಇವರಿಂದ ಹಾಳಾಗದಂತೆ ತಮ್ಮ ಇಲಾಖೆಯಿಂದ ವ್ಯವಸ್ಥೆ ಕಲ್ಪಿಸಬೇಕು ಎಂದು ಕೆಲವು ದಲಿತ ಮುಖಂಡರು ಈ ಸಭೆಯಲ್ಲಿ ಕೇಳಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಅಕ್ರಮವಾಗಿ ಮದ್ಯ ಮಾರಾಟ ಮಾಡುವವರ ಮೇಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ ಪುನಃ ಇಂಥ ಘಟನೆಗಳು ನಡೆಯದಂತೆ ಅಂತವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸೂಚಿಸಿದರು.

ಕೊಟ್ಟೂರು ವೃತ್ತದ ಸಿಪಿಐ ಶ್ರೀ ವೆಂಕಟಸ್ವಾಮಿಯವರು ದಲಿತರ ಕುಂದು ಕೊರತೆಗಳ ಸಭೆಯನ್ನು ಕುರಿತು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಪಿಎಸ್ಐ ಹೆಚ್ ನಾಗರತ್ನಮ್ಮ, ಎಎಸ್ಐ ಜಿಲಾನ್ ಭಾಷ, ಪೋಲಿಸ್ ಪೇದೆ ತಿಪ್ಪೆರುದ್ರಪ್ಪ ದಲಿತ ಮುಖಂಡರಾದ ಟಿ ಗಂಗಾಧರ, ಡಿ ಎಂ ಈಶ್ವರಪ್ಪ, ತುಂಬರಗುದ್ದಿ ದುರಗೇಶ್, ಕಾನ ಮಲಗು ಮುರುಗೇಶ, ಯೋಗಿ ಕರಿಬಸಪ್ಪ. ಮುಖಂಡರಾದ ಫೋಟೋ ಸಿದ್ದಲಿಂಗಪ್ಪ, ಯುವ ಮುಖಂಡ ಸೂರ್ಯಪ್ರಕಾಶ್, ಬೋರಣ್ಣ, ಗುಟ್ಟಲಿಂಗನ ಹಟ್ಟಿ ಬಸವರಾಜ್, ಯಂಬಾಳೆ ವೆಂಕಟೇಶ್ ಜೋಗಿಹಳ್ಳಿ ಸಿದ್ದಪ್ಪ, ರಜನಿಕಾಂತ,ಸಣ್ಣ ಮೈಲಪ್ಪ ದಂಡಪ್ಪ, ನೋಡುವಲ್ಲ ಮನೆ ನಾಗರಾಜ, ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ದಲಿತ ಮುಖಂಡರು ಸೇರಿದಂತೆ ಪೊಲೀಸ್ ಇಲಾಖೆ ಸಿಬ್ಬಂದಿ ಸಾರ್ವಜನಿಕರು ಇದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್. ಕಾನಾ ಹೊಸಹಳ್ಳಿ.**

## ಮದಭಾವಿ ಗ್ರಾಮದಲ್ಲಿ ಉಜ್ವಲ ಗ್ಯಾಸ್ ವಿತರಣಾ ಸಮಾರಂಭ

**ಮದಭಾವಿ :** ಕಾಗವಾಡ ಮತಕ್ಷೇತ್ರದ ಮದಭಾವಿ ಗ್ರಾಮದ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಕೇಂದ್ರ ಸರಕಾರದ ಮೂರನೇ ಬಾರಿಗೆ ಪ್ರಧಾನ. ಮಂತ್ರಿ ಆಗಿ ನರೇಂದ್ರ ಮೋದಿ ಅವರು ಅಧಿಕಾರ ಸ್ವೀಕಾರ ಮಾಡಿದ ಬಳಿಕ ಮತ್ತೆ ಉಜ್ವಲ ಯೋಜನೆ ಅಡಿಯಲ್ಲಿ ಗ್ಯಾಸ್ ಮಂಜೂರಾದ ಪಲಾನುಭವಿಗಳಿಗೆ ಗ್ಯಾಸ್ ಗಳನ್ನು ಕಾಂಗ್ರೆಸ್ ಪಕ್ಷದ ಮುಖಂಡ ಪ್ರವೀಣ ನಾಯಿಕ ವಿತರಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಆಗಲಿ ಕೇಂದ್ರದಲ್ಲಿ ಆಗಲಿ ಯಾವುದೆ ಪಕ್ಷ ಅಧಿಕಾರದಲ್ಲಿ ಇರಲಿ ಅದು ಮುಖ್ಯ ಅಲ್ಲಾ ಜನ ಸಾಮಾನ್ಯರಿಗೆ ಯೋಜನೆಗಳು ತಲುಪಿಸುವುದು ಮುಖ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸುರೇಶ ನಾಯಿಕ,ಗ್ರಾಮ ಪಂಚಾಯತ ಸದಸ್ಯ ಸಂತೋಷ ಕಲ್ಲೋತ್ತಿ, ಉಮೇಶ ಪಾಟೀಲ, ಸಿದರಾಯ ತೋಡಕರ,ಪಿ ಕೆ ಪಿ ಎಸ್ ಬ್ಯಾಂಕಿನ ನಿರ್ದೇಶಕ ಭೀಮಗೌಡ ನಾಯಿಕ, ಸಂತೋಷ ನಾಯಿಕ, ಧನಂಜಯ ಹವಾಲ್ದಾರ, ದಯಾನಂದ ಇಂಡೇನ್ ಗ್ಯಾಸ್ ಮಾಲೀಕರಾದ ಸತೀಶ ಹಲ್ಲೋಳಿ, ಕೃಷ್ಣ ಸುತಾರ, ಅಶೋಕ ಬಾಡಗಿ, ಮಹಾದೇವ ನಾಯಿಕ ಪ್ರೇಮಕುಮಾರ ನಾಯಿಕ ಹಾಗೂ ಪಲಾನುಭವಿಗಳು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಂ.ಎಂ. ಶರ್ಮಾ ಬೆಳಗಾವಿ.**

## ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ಹಲವಾರು ಯೋಜನೆಗಳು ಸುರಿಮಳೆ ಹರಿಸಿದಂತ ಶಾಸಕರು



**ರಾಂಪುರ :** ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದ ಎನ್ ವೈ ಗೋಪಾಲಕೃಷ್ಣ ಶಾಸಕರು ಸ್ಥಳೀಯ ರಾಂಪುರದ ಎಲ್ಲಮ್ಮನ ಎಸ್ಟೇಟ್ ನಲ್ಲಿ ಸಾರ್ವಜನಿಕರ ಅಹವಾಲಗಳನ್ನು ಆಲಿಸಿ ಅರ್ಜಿಯ ಮುಖಾಂತರ ಕ್ಷೇತ್ರದಗ್ರಾಮಗಳಿಂದಬಂದಿರ್ತಕ್ಕಂತ ಸಾರ್ವಜನಿಕರ ಅರ್ಜಿಗಳನ್ನು ತೆಗೆದು ಕೊಂಡು ಗ್ರಾಮದ ಜನ ಸಾಮಾನ್ಯರಿಗೆ ಅನುಕೂಲವಾಗುವ ಯೋಜನೆಗಳನ್ನು ತಿಳಿದು ಸರ್ಕಾರ ದಿಂದ ಅನುದಾನ ಬಿಡುಗಡೆ ಮಾಡಿಸಿ ಯೋಜನೆಗಳು ರೂಪಿಸಿ ಕೊಡಲು ಮುಂದಾದ ಶಾಸಕರು ಈಗ ಹಲವಾರು ಯೋಜನೆಗಳು ಕ್ಷೇತ್ರದಾದ್ಯಂತ ಕೆರೆ ಕಟ್ಟೆಗಳಾಗಿರಬಹುದು ತಳಕು ಹೋಬಳಿಯ ಐದಾರು ಕೆರೆಗಳಿಗೆ ಭದ್ರಾ ನೀರನ್ನು ಚಾನಲ್ ಮುಖಾಂತರ ನೀರು ಹರಿಯುವಂತೆ ಯೋಜನೆ ರೂಪಿಸಿದ್ದಾರೆ ಮತ್ತು ಗ್ರಾಮಗಳಲ್ಲಿ ಮನೆ ಇಲ್ಲದಂತವರಿಗೆ ಮನೆಗಳು ಸಹ ಮಂಜೂರು ಮಾಡಿಸಿದ್ದಾರೆ. ಕುಡಿಯುವ ನೀರಿನ ಸೌಲಭ್ಯ ಆಗಿರಬಹುದು ಗ್ರಾಮಗಳಲ್ಲಿ ಚರಂಡಿಯ ಸ್ವಚ್ಛತೆ ಬಗ್ಗೆ ಗ್ರಾಮಗಳಲ್ಲಿ ರೋಗರುಜಿನ ಅಂಟಬಾರದು ಎಂದು ಗಮನಹರಿಸಿ ಚರಂಡಿಗಳು ಕ್ಲೀನ್ ಮಾಡಿಸಿ ವಿದ್ಯುತ್ ದೀಪಗಳು ಹಾಕಿಸಿದ್ದಾರೆ. ಹಲವಾರು ಯೋಜನೆ ರೂಪಿಸಿ ಜನ ಸಾಮಾನ್ಯರಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ ಓಡಾಡುವಂತ ರಸ್ತೆಗಳು ಸಿಸಿ ರಸ್ತೆಗಳು ಆಗಿರಬಹುದು ರೈತರಿಗೆ ಇನ್ಸೂರೆನ್ಸ್ ಬೆಳೆ ಪರಿಹಾರಗಳು ಮತ್ತು ಈಗ ಮುಂಗಾರು ಹಂಗಾಮಿನಲ್ಲಿ ಬೀಜ ಗೊಬ್ಬರ ಭೂಮಿ ಉಳುಮೆ ಮಾಡಲು ಕೃಷಿ ಯಂತ್ರೋಪ ಉಪಕರಣಗಳು ಇಲಾಖೆಯಿಂದ ಸಣ್ಣ ಟ್ಯಾಕ್ಟರ್ ವಾಹನಗಳನ್ನು ಮಂಜೂರು ಮಾಡಿಸಿದ್ದಾರೆ ಅಂಗವಿಕಲರಿಗೆ ಥ್ರೀ ವೀಲರ್ 85 ಸ್ಕೂಟರ್ಗಳು ಸಹ ರೂಪಿಸಿದ್ದಾರೆ ಮೊಳಕಾಲ್ಮೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಮೊಳಕಾಲ್ಮೂರು ಪಟ್ಟಣದ ಅಕ್ಕ ಪಕ್ಕ ಇರುವ ರಸ್ತೆ ಹಾನಗಲ್ ಕಡೆಗೆ ಹೋಗುವ ರಸ್ತೆ ಡಬಲ್ ವಾಹನಗಳು ಓಡಾಡಿದರು ಕೂಡ ಅನುಕೂಲ ವಾಗುವಂತೆ ಲೆಫ್ಟ್ ರೈಟ್ ರಸ್ತೆಗಳನ್ನು ಮಾಡಿಸಿದ ಶಾಸಕರು ಮತ್ತು ಮೊಳಕಾಲ್ಮೂರು ಪಟ್ಟಣದಲ್ಲಿ ಕೆಎಸ್ಆರ್ಟಿಸಿ ಬಸ್ ಸ್ಟ್ಯಾಂಡ್ ಹೊಸ ಸಂತೆ ಮಾರ್ಕೆಟ್ ಮತ್ತು ಕೋನಸಾಗರದ ಗ್ರಾಮದ ಹತ್ತಿರ ಆರೂವರೆ ಕೋಟಿ ಮೊರಾರ್ಜಿ ವಸತಿ ಶಾಲೆಯನ್ನು ರೂಪಿಸಿರುತ್ತಾರೆ. ಮತ್ತು ರಾಯಪುರ ಗ್ರಾಮದ ಹತ್ತಿರ ಅಲೆಮಾರಿ ಜನಾಂಗದವರಿಗೆ ಜಾಗ ಮತ್ತು ಸೂರು ಒದಗಿಸುವಂತೆ ಸರ್ಕಾರ ದಿಂದ ಯೋಜನೆ ರೂಪಿಸಿದ್ದಾರೆ ರಾಂಪುರ ತಳಕು ಹೋಬಳಿಯ ಕಂದಾಯ ಇಲಾಖೆ ನಾಡ ಕಚೇರಿ ಆಫೀಸ್ ಗಳನ್ನು ಸಹ ಮಂಜೂರು ಮಾಡಿಸಿದ್ದಾರೆ. ಮತ್ತು ಶಿಕ್ಷಣಕ್ಕೆ ಶಾಲೆ ಬಿಲ್ಡಿಂಗ್ ಗಳು ಅಡಿಗೆ ಕೋಣೆ ಕಾಂಪೌಂಡ್ ಶೌಚಾಲಯಗಳು ರೂಪಿಸಿದ್ದಾರೆ ಶಾಸಕರು ಇನ್ನೂ ಹಲವಾರು ಯೋಜನೆಗಳು ರೂಪಿಸಿ ಮೊಳಕಾಲ್ಮೂರು ಕ್ಷೇತ್ರಕ್ಕೆ ಕೀರ್ತಿ ತಂದಿದ್ದಾರೆ ಅಭಿವೃದ್ಧಿ ಹರಿಕಾರರು ಎನ್ ವೈ ಗೋಪಾಲಕೃಷ್ಣ ಶಾಸಕರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ತಿಪ್ಪೇಸ್ವಾಮಿ. ಹೊಂಬಾಳೆ ಮೊಳಕಾಲ್ಮುರು.**

## ಕೆಡುಕಿನ ನಿರ್ಮೂಲನೆಗೆ ಸಂಘಟಿತರಾಗಿ: ಡಾ. ಮಹಮ್ಮದ್ ಸಾದ್

**ತಾಳಿಕೋಟಿ :** ಸಮಾಜದಲ್ಲಿರುವ ಕೆಡುಕುಗಳನ್ನು ನಿರ್ಮೂಲನೆಗೊಳಿಸಿ ಒಳಿತನ್ನು ಸಂಸ್ಥಾಪಿಸುವುದು ಮುಸ್ಲಿಂ ಸಮುದಾಯದ ಕರ್ತವ್ಯವಾಗಿದೆ ಈ ಕೆಲಸವನ್ನು ಅವರು ಸಂಘಟಿತರಾಗಿ ಮಾಡಬೇಕು ಎಂದು ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯಾಧ್ಯಕ್ಷ ಡಾ. ಮೊಹಮ್ಮದ್ ಸಾದ್ ಬೆಳಗಾಮಿ ಹೇಳಿದರು. ಶನಿವಾರ ಪಟ್ಟಣದ ಟೀಪು ನಗರದಲ್ಲಿರುವ ಆಲಾ ಮಸೀದಿ ಸಭಾಂಗಣದಲ್ಲಿ ಜಮಾತೆ ಇಸ್ಲಾಮೀ ಹಿಂದ್ ನಗರ ಶಾಖೆಯ ವತಿಯಿಂದ ಹಮ್ಮಿಕೊಂಡ ಮುಸ್ಲಿಂ ಸಮಾಜದ ಗಣ್ಯರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇಂದು ನಮ್ಮ ಸಮಾಜದಲ್ಲಿ ಸಾಮಾಜಿಕ ಕೆಡುಕುಗಳಾದ ಕೋಮುವಾದ ಭ್ರಷ್ಟಾಚಾರ ನೈತಿಕ ಅಧಿಪತನ ಸ್ವಜನಪಕ್ಷಪಾತ ಧಾರ್ಮಿಕ ಅಸಹಿಷ್ಣುತೆ ಹಾಗೂ ದ್ವೇಷವು ದಿನದಿಂದ ದಿನ ಹೆಚ್ಚಾಗುತ್ತಿದೆ ಇವು ದೇಶದ ಪ್ರಗತಿ



ಹಾಗೂ ಶಾಂತಿಗೆ ಮಾರಕವಾಗಿವೆ ಇವುಗಳನ್ನು ನಿರ್ಮೂಲನೆಗೊಳಿಸದೇ ಹೋದಲ್ಲಿ ಸದೃಢ ಭಾರತದ ನಿರ್ಮಾಣ ಅಸಾಧ್ಯವಾಗಿದೆ. ದೇಶದ ಹಿತ ಚಿಂತನೆ ಎಲ್ಲರ ಕರ್ತವ್ಯವಾಗಿದೆ. ಭಾರತ ಜಗತ್ತಿನಲ್ಲಿಯೇ ಶ್ರೇಷ್ಠ ಧಾರ್ಮಿಕ ಪರಂಪರೆಯನ್ನು ಹೊಂದಿದ ದೇಶವಾಗಿದೆ ಶತ ಶತಮಾನಗಳಿಂದ ಇಲ್ಲಿ ಎಲ್ಲ ಧರ್ಮಗಳ ಜನರು ಪ್ರೀತಿ ಮತ್ತು ವಿಶ್ವಾಸದಿಂದ ಬದುಕುತ್ತಿದ್ದಾ-ರೆ ಇದನ್ನು ಸಹಿಸದ ಕೆಲವರು ಕೇವಲ ತಮ್ಮ ಸ್ವಾರ್ಥ ಸಾಧನೆಗಾಗಿ ಜನರ ಮಧ್ಯ ದ್ವೇಶವನ್ನು ಬಿತ್ತುವ ಕೆಲಸ ಮಾಡುತ್ತಿದ್ದಾರೆ ಇವರನ್ನು ನಿಯಂತ್ರಿಸುವ ಕೆಲಸ ಆಗಬೇಕು ನಾವೆಲ್ಲರೂ ಒಂದು ನಾವೆಲ್ಲರೂ ಭಾರತೀಯರು ಎಂಬ ಭಾವನೆಯು ಎಲ್ಲರಲ್ಲೂ ಬರಬೇಕಾಗಿದೆ ಮುಸ್ಲಿಂ ಸಮುದಾಯ ಇಂಥಹ ಸಂಕೀರ್ಣ ಸಮಯದಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಮುಂದೆ ಬರಬೇಕಾಗಿದೆ ಜಮಾತೆ ಇಸ್ಲಾಮೀ ಹಿಂದ್ ಸಂಘಟನೆಯು ಮುಸ್ಲಿಂ ಸಮುದಾಯದಲ್ಲಿ ಇದರ ಕುರಿತು ಜಾಗೃತಿಯನ್ನು ಮೂಡಿಸುವ ಕೆಲಸ ಮಾಡುತ್ತಿದೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು ಎಂದರು. ವೇದಿಕೆಯಲ್ಲಿ ಜಮಾತೆ ಇಸ್ಲಾಮಿ ಹಿಂದ್ ಕಾರ್ಯದರ್ಶಿ ಮಹಮ್ಮದ್ ತಲಹಾ ಬೆಂಗಳೂರು. ಬೆಳಗಾವಿ ವಿಭಾಗೀಯ ಸಂಚಾಲಕ ಎಂ.ಐ.ಬಡಗಣ.ಸಂಘಟನಾ ಕಾರ್ಯದರ್ಶಿ ಮಹಮ್ಮದ್ ಬಿಲಾಲ ಇದ್ದರು. ಅಲ್ಲಾಭಕ್ಷ ನಮಾಜಕಟ್ಟಿ ಕುರಆನ್ ಪಠಿಸಿದರು.ಸ್ಥಾನೀಯ ಅಧ್ಯಕ್ಷ ಮುಜಾಹೀದ ನಮಾಜ ಕಟ್ಟಿ ನಿರೂಪಿಸಿದರು.

## ಒತ್ತಡ ನಿವಾರಣೆಗೆ ಯೋಗ ಪರಿಣಾಮಕಾರಿ: ಎನ್.ಬಿ. ನಡುವಿನಮನಿ




**ತಾಳಿಕೋಟಿ :** ಮಾನಸಿಕ ಮತ್ತು ದೈಹಿಕ ಒತ್ತಡ ನಿವಾರಣೆಗೆ ಯೋಗ ಪರಿಣಾಮಕಾರಿ ಚಿಕಿತ್ಸೆಯಾಗಿದೆ. ಮಾನಸಿಕ ಒತ್ತಡದಲ್ಲಿ ಸಿಲುಕುವ ವಿದ್ಯಾರ್ಥಿಗಳು ವಯೋವೃದ್ಧರು ಉದ್ಯೋಗಿಗಳು ಮುಂತಾದವರಿಗೆ ಯೋಗ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಬಿ.ನಡುವಿನಮನಿ ಹೇಳಿದರು.

ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಮೈಲೇಶ್ವರದ ಬ್ರಿಲಿಯಂಟ್ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಯೋಗಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಾವಿಂದು ಯೋಗದ ಮಹತ್ವ ಮರೆಯುತ್ತಿದ್ದೇವೆ ಈ ಕಾರಣ-ಕ್ಕಾಗಿ ಹಲವಾರು ಮಾನಸಿಕ ದೈಹಿಕ ರೋಗರು ಜಿನೆಗಳಿಂದ ಬಳಲುತ್ತಿದ್ದೇವೆ. ಇವುಗಳನ್ನು ದೂರುಕರಿಸಲು ಹಾಗೂ ಉತ್ತಮಆರೋಗ್ಯವನ್ನು ಪಡೆದುಕೊಳ್ಳಲು ಯೋಗ ಸಹಕಾರಿ ಆಗುತ್ತದೆ ಇದನ್ನು ನಾವೆಲ್ಲರೂ ಜೀವನದ ಉದ್ದಕ್ಕೂ ಪಾಲಿಸುವ ಅಗತ್ಯ ಇದೆ ಎಂದರು. ಆಂಗ್ಲ ಮಾಧ್ಯಮ ಮುಖ್ಯ ಗುರುಗಳಾದ ಅಭಿಲಾಷ ಅವರು ಮಾತನಾಡಿ ಯೋಗವು ಭಾರತದ ಅತ್ಯಂತ ಪ್ರಾಚೀನವಾದ ಒಂದು ಪದ್ಧತಿಯಾಗಿದೆ ಆದರೆ ನಾವು ಇಂದಿನ ತಾಂತ್ರಿಕ ಯುಗದಲ್ಲಿ ನಾವು ಅದನ್ನು ಮರೆತಿದ್ದೇವೆ ಅದರ ಬಹಳಷ್ಟು ಪ್ರಯೋಜನಗಳಿವೆ ಸದೃಢ ದೇಹದಲ್ಲಿ ಸದೃಢ ಮನಸ್ಸು ಇರಲು ಸಾಧ್ಯ ಇದಕ್ಕಾಗಿ ನಾವೆಲ್ಲರೂ ಯೋಗದ ಕುರಿತು ಹೆಚ್ಚು ಆಸಕ್ತಿ ವಹಿಸಬೇಕು.

ಇದು ರೋಗನಿರೋಧಕ ಶಕ್ತಿಯಾಗಿ ಕೆಲಸ ಮಾಡುತ್ತದೆ ಇದರಿಂದ ದೇಹದಲ್ಲಿ ಹಲವಾರು ರೋಗ ನಿರೋಧಕ ಶಕ್ತಿಗಳು ಉತ್ಪನ್ನಗೊಳ್ಳುತ್ತವೆ ಯೋಗದ ಜೊತೆಗೆ ನಮ್ಮ ದಿನನಿತ್ಯದ ಆಹಾರ ಪದ್ಧತಿಯನ್ನು ನಾವು ಅರಿತುಕೊಂಡಿರುವುದು ಉತ್ತಮ ಎಂದರು. ಈ ಕಾರ್ಯಕ್ರಮದಲ್ಲಿ ಮಾರುತಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರು ಕಾರ್ಯದರ್ಶಿಗಳು ಮುಖ್ಯ ಗುರುಗಳು ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ಕೋಣವೊಂದು ಬಾವಿಗೆ: ಕಾಪಾಡಿದ ಅಗ್ನಿಶಾಮಕ ದಳ



**ಹೊಸಟ್ಟಿ :** ಅಥಣಿ ತಾಲೂಕಿನ ಹೊಸಟ್ಟಿ ಗ್ರಾಮದಲ್ಲಿ ಶ್ರೀಯಲ್ಲಾಲಿಂಗ್ ಐಹೊಳೆರವರ ಕೋಣ ಸೇದು ಬಾವಿಯಲ್ಲಿ ಅಂದಾಜು 30ಥ30 ಅಡಿ ವಿಸ್ತಾರವಾದ 50 ರಿಂದ 55 ಅಡಿ ಆಳದ ಅದರಲ್ಲಿ 10 ಅಡಿ ಆಳದ ತೇರೆದ ನೀರಿರುವ ಭಾವಿ ಆಕಸ್ಮಿಕವಾಗಿ ಕಾಲುಜಾರಿ ಕೋಣ ಬಿದ್ದಿದ್ದು, ಸದರಿ ಸ್ಥಳೀಯ ನಿವಾಸಿಗಳು ಘಟನೆಯ ವಿಷಯವನ್ನು ಅಥಣಿ ಅಗ್ನಿಶಾಮಕ ಠಾಣೆ ದೂರವಾಣಿಗೆ ಕರೆ ಮಾಡಿ ತಿಳಿಸಿದರು, ಕರೆ ಬಂದ ತಕ್ಷಣ ಜಲ ವಾಹನದೊಂದಿಗೆ ಅಗ್ನಿಶಾಮಕ ತಂಡ ಸ್ಥಳಕ್ಕೆ ದೌಡಾಯಿಸಿ ಕಾರ್ಯ ಪ್ರವೃತ್ತರಾಗಿ ಸುಮಾರು 50 ರಿಂದ 55 ಅಡಿ ಆಳದ ಸೇದು ಬಾವಿಯಲ್ಲಿ ಹೋಸ ಹಗ್ಗಗಳ ಸಹಾಯ ದಿಂದ ಕೆಳಗಿಳಿದು ಸುಮಾರು 01:05 ಒಂದು ಘಂಟೆ ಐದು ನಿಮಿಷಗಳ ಕಾಲ ಶ್ರಮವಹಿಸಿ ಸಿಬ್ಬಂದಿಯವರು ಪ್ರಾಣ ರಕ್ಷಣೆಗಾಗಿ ಕೂಗುತ್ತಿದ್ದ ಕೋಣಯನ್ನು ಜೀವಂತವಾಗಿ ಅಗ್ನಿಶಾಮಕ ಇಲಾಖೆಯ ತಂಡ ರಕ್ಷಣೆ ಮಾಡಿರುತ್ತಾರೆ. ಈ ಸಮಯ ಪ್ರಜ್ಞೆ ಕಾರ್ಯವನ್ನು ವೀಕ್ಷಿಸಿದ ಹೊಸಟ್ಟಿ ಗ್ರಾಮದ ಸ್ಥಳೀಯ ನಿವಾಸಿಗಳು ಅಗ್ನಿಶಾಮಕ ತಂಡದ ಕಾರ್ಯದಕ್ಷತೆಯನ್ನು ಮೆಚ್ಚಿ ಶ್ಲಾಘಿಸಿ ಹಾಗೂ ಹಸ್ತಲಾಘವ ಮಾಡಿ ಕೋಣದ ಪ್ರಾಣ ರಕ್ಷಣೆ ಮಾಡಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು. ಅಗ್ನಿಶಾಮಕ ತಂಡದಲ್ಲಿ ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ರವರಾದ ಮಲ್ಲಿಕಾರ್ಜುನ ಬಂದಾಳ ರವರ ನೇತ್ರತ್ವದಲ್ಲಿ ಪ್ರಶಾಂತ.ಚವಾಣ ,ಸಚಿನ್ ಹಲ್ಯಾಳ ಮೊಹಸಿನ್ ಪಠಾಣ, ಸಂತೋಷ್ ಧರ್ಮಟ್ಟಿ , ಭಾಗವಹಿಸಿದ್ದರು.

## ಪರಿಚ್ಛೇದ 371(ಜೆ) ಕಾಯ್ದೆ ತಿದ್ದುಪಡಿ ವಿರೋಧ ಸಲ್ಲದು. ದಂಡಿಯಾ

**ಬಾಗಲಕೋಟ :** ಉತ್ತರ ಕರ್ನಾಟಕದ ಭಾಗವಾದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ
ಎಲ್ಲ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ಪರಿಚ್ಛೇದ 371(ಜೆ) ತಿದ್ದುಪಡಿಗೆ ಬೆಂಗಳೂರಿನ ಹಸಿರು ಪ್ರತಿಷ್ಠಾನ ವಿರೋಧಿಸುತ್ತಿರುವುದು ಖಂಡನೀಯವಾಗಿದೆ ಇದು ಸಲ್ಲದು ಅಂತಾ ಉತ್ತರ ಕರ್ನಾಟಕ ಹೋರಾಟ ಸಮಿತಿ ಉಪಾಧ್ಯಕ್ಷರಾದ ಎ.ಎ.
ದಂಡಿಯಾ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಖ್ಯಾತ ಅರ್ಥಶಾಸ್ತ್ರಜ್ಞ ದಿ. ಡಾ.ಡಿ.ಎಮ್.
ನಂಜುಂಡಪ್ಪ ವರದಿಯಲ್ಲಿಯೂ ಉತ್ತರ ಕರ್ನಾಟಕದ 14 ಜಿಲ್ಲೆಗಳೂ ಅತ್ಯಂತ ಹಿಂದುಳಿದ ಜಿಲ್ಲೆಗಳೂ ಅದರಲ್ಲೂ ಕಲ್ಯಾಣ್ ಕರ್ನಾಟಕದ ಜಿಲ್ಲೆಗಳು ಅಧಿಕವಾಗಿ ಹಿಂದುಳಿದಿರುವುದರಿಂದ ಅವುಗಳ ಅಭಿವೃದ್ಧಿಗೆ ಪರಿಚ್ಛೇದ 371(ಜೇ) ತಿದ್ದುಪಡಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಲಾಗಿದೆ.
ಇದನ್ನು ಸಹಿಸದ ಬೆಂಗಳೂರು ಜನರು ಇದನ್ನು
ರದ್ದುಗೊಳಿಸಬೇಕೆಂದು ಪ್ರತಿಭಟನೆ ಮಾಡುತ್ತಿದ್ದಾರೆ.
ಉತ್ತರ ಕರ್ನಾಟಕದ ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಏಳಿಗೆ ಮೈಸೂರು ಪ್ರಾಂತ್ಯದವರಿಗೆ ಸಹಿಸಲು ಸಾಧ್ಯವಿಲ್ಲ.
1956 ರ ಏಕೀಕರಣ ನಂತರದಿಂದಲೂ ಈ ಅನ್ಯಾಯ,ಮಲತಾಯಿ
ಧೋರಣೆ ಸದಾ ತೋರುತ್ತಿದ್ದಾರೆ.
ಇದರಿಂದ ಪಾರಾಗಲು ಕೇವಲ ಒಂದೇ ಉಪಾಯ ಕಲ್ಯಾಣ್ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ 14+ ಜಿಲ್ಲೆಯನ್ನೊಳಗೊಂಡ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ರಚನೆ.
ಇಲ್ಲವಾದಲ್ಲಿ ಇಂತಹ ಅನ್ಯಾಯ ತಪ್ಪಿದ್ದಲ್ಲ.
ಮುಂದಿನ ಪೀಳಿಗೆಗೆ ನಾವೇ ದ್ರೋಹ ಮಾಡಿದಂತಾಗುವುದು. ಪ್ರತ್ಯೇಕ ರಾಜ್ಯ ರಚನೆ ಕುರಿತಂತೆ ಗಂಭೀರ ಚಿಂತನೆ ಮಾಡಲು 14+ ಜಿಲ್ಲೆಗಳ ಮಠಾಧೀಶರು, ಸಾಹಿತಿಗಳು, ನಿವೃತ
ನ್ಯಾಯಾಧೀಶರು, ನಿವೃತ ಅಧಿಕಾರಿಗಳು, ಶಿಕ್ಷಕರು, ನೌಕರರು, ರೈತ ಮುಖಂಡರು, ನ್ಯಾಯವಾದಿಗಳು, ವೈದ್ಯರು, ಮಾಜಿ ಸೈನಿಕರು, ಚಿಂತಕರು ಹಾಗೂ ವಿವಿಧ ಸಂಘಟಕರು ಯುವಕರ ಭವಿಷ್ಯಕ್ಕಾಗಿ ಹೋರಾಟ ಅನಿವಾರ್ಯ ಹಾಗೂ ಅವಶ್ಯವೆಂದು ದಂಡಿಯಾ ಮನವಿ ಮಾಡಿಕೊಂಡಿದ್ದಾರೆ.
ಪ್ರತ್ಯೇಕ ರಾಜ್ಯ ರಚನೆ ಕುರಿತಂತೆ 1999 ರ ಫೆಬ್ರುವರಿ 26 ರಂದು ಜರುಗಿದ ಬಾಗಲಕೋಟ ನಗರ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರ ಮಾಡಲಾಗಿದೆ.
14+ ಜಿಲ್ಲೆಗಳ ನಕ್ಷೆಯನ್ನೂ ತಯಾರಿಸಲಾಗಿದೆ.

## ಹೊಸಟ್ಟಿ ಗ್ರಾಮದಲ್ಲಿ ಕೋಣವೊಂದು ಆಕಸ್ಮಿಕವಾಗಿ ಕಾಲುಜಾರಿ ಬಿದ್ದಿದ್ದನ್ನು ಕಾಪಾಡಿದ ಅಗ್ನಿಶಾಮಕ ದಳ

**ಹೊಸಟ್ಟಿ :** ಅಥಣಿ ತಾಲೂಕಿನ ಹೊಸಟ್ಟಿ ಗ್ರಾಮದಲ್ಲಿ ಶ್ರೀಯಲ್ಲಾಲಿಂಗ್ ಐಹೊಳೆರವರ ಕೋಣ ಸೇದು ಬಾವಿಯಲ್ಲಿ ಅಂದಾಜು 30ಥ30 ಅಡಿ ವಿಸ್ತಾರವಾದ 50 ರಿಂದ 55 ಅಡಿ ಆಳದ ಅದರಲ್ಲಿ 10 ಅಡಿ ಆಳದ ತೇರೆದ ನೀರಿರುವ ಭಾವಿ ಆಕಸ್ಮಿಕವಾಗಿ ಕಾಲುಜಾರಿ ಕೋಣ ಬಿದ್ದಿದ್ದು, ಸದರಿ ಸ್ಥಳೀಯ ನಿವಾಸಿಗಳು ಘಟನೆಯ ವಿಷಯವನ್ನು ಅಥಣಿ ಅಗ್ನಿಶಾಮಕ ಠಾಣೆ ದೂರವಾಣಿಗೆ ಕರೆ ಮಾಡಿ ತಿಳಿಸಿದರು,
ಕರೆ ಬಂದ ತಕ್ಷಣ ಜಲ ವಾಹನದೊಂದಿಗೆ ಅಗ್ನಿಶಾಮಕ ತಂಡ ಸ್ಥಳಕ್ಕೆ ದೌಡಾಯಿಸಿ ಕಾರ್ಯ ಪ್ರವೃತ್ತರಾಗಿ ಸುಮಾರು 50 ರಿಂದ 55 ಅಡಿ ಆಳದ ಸೇದು ಬಾವಿಯಲ್ಲಿ ಹೋಸ ಹಗ್ಗಗಳ ಸಹಾಯ ದಿಂದ ಕೆಳಗಿಳಿದು ಸುಮಾರು 01:05 ಒಂದು ಘಂಟೆ ಐದು ನಿಮಿಷಗಳ ಕಾಲ ಶ್ರಮವಹಿಸಿ ಸಿಬ್ಬಂದಿಯವರು ಪ್ರಾಣ ರಕ್ಷಣೆಗಾಗಿ ಕೂಗುತ್ತಿದ್ದ ಕೋಣಯನ್ನು ಜೀವಂತವಾಗಿ ಅಗ್ನಿಶಾಮಕ ಇಲಾಖೆಯ ತಂಡ ರಕ್ಷಣೆ ಮಾಡಿರುತ್ತಾರೆ. ಈ ಸಮಯ ಪ್ರಜ್ಞೆ



ಕಾರ್ಯವನ್ನು ವೀಕ್ಷಿಸಿದ ಹೊಸಟ್ಟಿ ಗ್ರಾಮದ ಸ್ಥಳೀಯ ನಿವಾಸಿಗಳು ಅಗ್ನಿಶಾಮಕ ತಂಡದ ಕಾರ್ಯದಕ್ಷತೆಯನ್ನು ಮೆಚ್ಚಿ ಶ್ಲಾಘಿಸಿ ಹಾಗೂ ಹಸ್ತಲಾಘವ ಮಾಡಿ ಕೋಣದ ಪ್ರಾಣ ರಕ್ಷಣೆ ಮಾಡಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು.
ಅಗ್ನಿಶಾಮಕ ತಂಡದಲ್ಲಿ ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ರವರಾದ ಮಲ್ಲಿಕಾರ್ಜುನ ಬಂದಾಳ ರವರ ನೇತ್ರತ್ವದಲ್ಲಿ ಪ್ರಶಾಂತ.ಚವಾಣ ,ಸಚಿನ್ ಹಲ್ಯಾಳ ಮೊಹಸಿನ್ ಪಠಾಣ, ಸಂತೋಷ್ ಧರ್ಮಟ್ಟಿ , ಭಾಗವಹಿಸಿದ್ದರು.

# ಪುರಾತನ ಸೂರ್ಯ-ಚಂದ್ರವಾದ್ಯ ತರಬೇತಿ ಶಿಬಿರ

## ನಶಿಸುತ್ತಿರುವ ಪುರಾತನ ಕಲೆಗಳನ್ನು ಉಳಿಸಿ ಬೆಳೆಸಬೇಕಾಗಿದೆ: ಕರಡಿ



**ಮಹಾಲಿಂಗಪುರ :** ನಶಿಸಿ ಹೋಗುತ್ತಿರುವ ಕಲೆಗಳ ಪಟ್ಟಿಗೆ ಸೇರಿರುವ ಕರಡಿವಾದ್ಯ ಮೇಳದ ಒಂದು ಭಾಗವಾದ ಪುರಾತನ ಸೂರ್ಯ-ಚಂದ್ರ ಕಲೆಯನ್ನು ಉಳಿಸಿ ಬೆಳೆಸಬೇಕಾಗಿದೆ ಎಂದು ಕರಡಿ ಕಲಾವಿದ, ಸಂಪನ್ಮೂಲ ವ್ಯಕ್ತಿ ಮಹಾಲಿಂಗಪ್ಪ ಮ. ಕರಡಿ ಹೇಳಿದರು.

ಪಟ್ಟಣದ ಹಿರಿಯ ಕರಡಿ ಕಲಾವಿದ ಗಂಗಪ್ಪ ಕರಡಿಯವರ ಕಲಾಕುಟೀರದಲ್ಲಿ ಕೇಂದ್ರ ಸರ್ಕಾರದ ಸಂಗೀತ ನಾಟಕ ಅಕಾಡೆಮಿ ನವದೆಹಲಿ ಅವರ ಅಡಿಯಲ್ಲಿ ನಶಿಸಿ ಹೋಗುತ್ತಿರುವ ಪುರಾತರನ ಕಲೆಗಳ ರಕ್ಷಣೆಗಾಗಿ ಹಮ್ಮಿಕೊಂಡ ಕಲಾ ದೀಕ್ಷಾ-ಗುರುಶಿಷ್ಯ ಪರಂಪರೆ ಕಾರ್ಯಕ್ರಮದ ಪ್ರಾರಂಭೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು ಕೇಂದ್ರ ಸರ್ಕಾರದ ಸಂಗೀತ ನಾಟಕ ಅಕಾಡೆಮಿಯು ನಮ್ಮ ದೇಶದ ಪುರಾತನ ಮತ್ತು ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಪ್ರತಿವರ್ಷ ಆಯಾ ರಾಜ್ಯಗಳಲ್ಲಿ ನಶಿಸಿ ಹೋಗುತ್ತಿರುವ ಪುರಾತನ ಕಲೆಗಳ ಪಟ್ಟಿಮಾಡಿಕೊಂಡು ತರಬೇತಿ ಶಿಬಿರ ಆಯೋಜಿಸಿ ಕಲೆಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದೆ.

ಪ್ರಸಕ್ತ ವರ್ಷ ಕರ್ನಾಟಕ ರಾಜ್ಯದಲ್ಲಿ ಉತ್ತರ ಕರ್ನಾಟಕದ ಸೂರ್ಯವಾದ್ಯ, ಚಂದ್ರವಾದ್ಯ ಹಾಗೂ ಕಾಸಗೋಡಿನ ಸೂತ್ರದ ಗೊಂಬೆ ಸೇರಿ ಎರಡು ಕಲೆಗಳನ್ನು ಆಯ್ಕೆ ಮಾಡಿ ಒಂದು ವರ್ಷವಿಡಿ ತರಬೇತಿ ನೀಡಲಿದೆ. ನಮ್ಮ ಕುಟುಂಬದ ಪುರಾತನ ಕರಡಿ ವಾದ್ಯದ ಒಂದು ಭಾಗವಾದ ವಿಶಿಷ್ಠವಾದ ಸೂರ್ಯವಾದ್ಯ-ಚಂದ್ರವಾದ್ಯ ಕಲೆಯು ಇಂದು ನಶಿಸಿ ಹೋಗುತ್ತಿದೆ. ಇದನ್ನು ಉಳಿಸಿ ಬೆಳೆಸುವದಕ್ಕಾಗಿ ಕಲಾ ದೀಕ್ಷಾ-ಗುರುಪರಂಪರೆ ಶಿಬಿರದಲ್ಲಿ ಆಸಕ್ತ 10 ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗುವದು ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ, ಕಸಾಪ ವಲಯ ಅಧ್ಯಕ್ಷ ಬಸವರಾಜ ಮೇಟಿ ಮಾತನಾಡಿ ಮಹಾಲಿಂಗೇಶ್ವರ ಶ್ರೀಗಳಿಂದ ಆಶೀರ್ವಾದ ಪಡೆದುಕೊಂಡು, ದೇಶ ವಿದೇಶಗಳಲ್ಲಿ ಖ್ಯಾತಿ ಪಡೆದ ಕರಡಿ ಮನೆತನದಿಂದ, ಸೂರ್ಯವಾದ್ಯ-ಚಂದ್ರವಾದ್ಯ ಕಲೆಯ ತರಬೇತಿ ಮಾರ್ಗದರ್ಶಕರಾಗಿ ಆಯ್ಕೆಯಾದ ಮಹಾಲಿಂಗಪ್ಪ ಕರಡಿ ಅವರ ಗರಡಿಯಲ್ಲಿ ಹತ್ತಾರು ಯುವ ಕಲಾವಿದರು ತರಬೇತಿ ಪಡೆದು ಪುರಾತನ ಕಲೆಯನ್ನು ಉಳಿಸಿ ಬೆಳೆಸುವಂತಾಗಲಿ ಎಂದರು.

ರನ್ನಬೆಳಗಲಿಯ ಹಿರಿಯ ಕರಡಿ ಕಲಾವಿದರಾದ ಮಹಾದೇವ ಮುರನಾಳ, ರುದ್ರಯ್ಯಾ ಸಾಲಿಮಠ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಪತ್ರಕರ್ತ ಚಂದ್ರಶೇಖರ ಮೋರೆ, ಕರಡಿ ಮನೆತನದ ಹಿರಿಯ ಕಲಾವಿದರಾದ ಗಂಗಪ್ಪ ಕರಡಿ, ಕಲ್ಲಪ್ಪ ಕರಡಿ, ಚನ್ನಮಲ್ಲ ಕರಡಿ ಸೇರಿದಂತೆ ಶಿಬಿರಾರ್ಥಿಗಳು ಇದ್ದರು.

# ಸಂಭ್ರಮದ ಬಕ್ರೀದ ಹಬ್ಬ ಆಚರಣೆ





**ಚಿಮ್ಮಡ :** ತ್ಯಾಗ, ಬಲಿದಾನ, ಸೌಹಾರ್ದತೆ ಸಂಕೇತವಾಗಿರುವ ಬಕ್ರೀದ ಹಬ್ಬವನ್ನು ಗ್ರಾಮದ ಮುಸ್ಲಿಮ್ ಬಾಂಧವರು ಸಡಗರ ಸಂಭ್ರಮದೊಂದಿಗೆ ಸೌಹಾರ್ದಯುತವಾಗಿ ಆಚರಿಸಿದರು.

ಮುಂ 7-45ಕ್ಕೆ ಗ್ರಾಮದ ಜಾಮಿಯಾ ಮಸೀದಿಯಲ್ಲಿ ಸೇರಿನಂತರಕಾಲ್ನಡಿಗೆಯಮೂಲಕಸಮೀಪದಇದ್ಗಾ ಮೈದಾನ ಹೋಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಸೌಹಾರ್ದತೆ ಮೂಡಿಸುವಂತೆ, ಪ್ರಕ್ರತಿಯ ಮೇಲಿನ ಮುನಿಸು ತೊರೆದು ಕರುಣೆ ದಯಪಾಲಿಸುವಂತೆ, ದೇಶದಲ್ಲಿ ಸೌಹಾರ್ದತೆ ನೆಲೆಸುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿದರು. ನಂತರ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ನಂತರ ಖಬರಸ್ಥಾನಕ್ಕೆ ಭೇಟಿ ನೀಡಿ ಅಗಲಿದ ಕುಟುಂಬಸ್ಥರ, ಪೂರ್ವಜರ ಸ್ವರ್ಗ ಪ್ರಾಪ್ತಿಗಾಗಿ ದುವಾ ಮಾಡಿದರು.

ಸಾಮೂಹಿಕ ಪ್ರಾರ್ಥನೆಯನ್ನು ಹಾಫಿಜ ಲಾಲಮೊಹಮ್ಮದ ಜಮಖಂಡಿ ನಡೆಸಿದರು. ಅಂಜುಮನ್ ಜಮಾತ ಅಧ್ಯಕ್ಷರಾದ ಹಾಫಿಜ ಸಲೀಮ ಜಮಖಂಡಿ, ಹಾಫಿಜ ಇಸ್ಮಾಯಿಲ್ ನದಾಫ, ಹಾಫಿಜ ಹಜರತ್ ನದಾಫ ನೇತ್ರತ್ವವಹಿಸಿದ್ದರು. ಪ್ರಮುಖರಾದ ರುಸ್ತುಮ್‌ಮಾಲದಾರ,ಹನಿಫಚಿಕ್ಕೋಡಿ,ಮೀರಾಸಾಬ ಯಾದವಾಡ,ಅಲ್ಲಾವುದ್ದಿನ ಮೋಪಗಾರ,ಅಮೀರಲಿ ಸರಕಾವಸ, ಹಾಜಿಲಾಲ ಜಮಾದಾರ ಸೇರಿದಂತೆ ನೂರಾರುಜನಮುಸ್ಲಿಂಬಾಂಧವರುಉಪಸ್ಥಿತರಿದ್ದರು. ಹಬ್ಬದ ನಿಮಿತ್ಯ ವಿಶೇಷ ಖಾದ್ಯ ಸುರಖುರಮಾವನ್ನು ತಮ್ಮ ಸ್ನೇಹಿತರಿಗೆ ಅಥಿತಿಗಳೊಂದಿಗೆ ಹಂಚಿಕೊಳ್ಳುವ ಮೂಲಕ ಖುಷಿ ಅನುಭವಿಸಿದರು.

# ಪಟ್ಟಣದ ಸಮಗ್ರ ಅಭಿವೃದ್ಧಿಗೆ ನೀಲಿನಕ್ಷೆ






**ಮಹಾಲಿಂಗಪುರ :** ಪಟ್ಟಣದ ಸಮಗ್ರ ಅಭಿವೃದ್ಧಿ ದೃಷ್ಟಿಕೋನ ಇಟ್ಟುಕೊಂಡು ಸಾಮಾಜಿಕ ಹೋರಾಟಗಾರ ಚನಬಸು ಹುರಕಡ್ಲಿ ನೀಲಿ ನಕ್ಷೆ ತಯಾರಿಸಿದ್ದು, ಹಲವು ಸಲಹೆಗಳನ್ನು ನೀಡಿ ಸರ್ಕಾರದ ಮಟ್ಟದಲ್ಲಿ ಪತ್ರದ ಮೂಲಕ ಹೋರಾಟ ಮಾಡಲು ನಿರ್ಧರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಹಂತದಲ್ಲಿ ಶಾಸಕರು, ಸಚಿವರಿಗೆ, ಅಧಿಕಾರಿಗಳಿಗೆ ಪತ್ರ ಕಳುಹಿಸಲಾಗುವುದು.

ಅವರಿಂದ ಬರುವ ಸ್ಪಂದನೆ ನೋಡಿ ಮುಂದಿನ ಹೋರಾಟದ ಬಗ್ಗೆ ನಿರ್ಧರಿಸಲಾಗುವುದು ಎಂದರು.

ಈಗಾಗಲೇ ಪತ್ರದ ಮೂಲಕ ಹೋರಾಟ ಮಾಡಿದ್ದರಿಂದ ಬಸವೇಶ್ವರ ವೃತ್ತದಿಂದ ಧವಳೇಶ್ವರ ಕಮಾನುವರೆಗೆ ಬೀದಿದೀಪ ಕಾಮಗಾರಿ ಪ್ರಗತಿಯಲ್ಲಿದೆ. ಮುಧೋಳ-ನಿಪ್ಪಾಣಿ ರಾಜ್ಯ ಹೆದ್ದಾರಿ ನಿರ್ಮಾಣ ಸಮಯದಲ್ಲಿ ಪಟ್ಟಣದ ವ್ಯಾಪ್ತಿಯಲ್ಲಿ ಡಬಲ್ ರಸ್ತೆ, ರಸ್ತೆ ವಿಭಜಕ ನಿರ್ಮಾಣವಾಗಿದೆ. ಹೀಗಾಗಿ, ಇದೇ ರೀತಿ ಪತ್ರದ ಮೂಲಕ ಪಟ್ಟಣದ ಸಮಗ್ರ ಅಭಿವೃದ್ಧಿಯ ಹೋರಾಟಕ್ಕೆ ಅಣಿಯಾಗಿದ್ದು, ಸಾರ್ವಜನಿಕರು ಪಕ್ಷಾತೀತ, ಜಾತ್ಯಾತೀತವಾಗಿ ಇದಕ್ಕೆ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಅಂತರ್ಜಲಕ್ಕೆ ಮೂಲಾಧಾರವಾಗಿರುವ ಪಟ್ಟಣದ ಕೆರೆಯನ್ನು ಇನ್ನಷ್ಟು ಅಭಿವೃದ್ಧಿ ಮಾಡುವುದು. ಇದರ ಜೊತೆಗೆ ಕೆರೆಯ ಪಕ್ಕದಲ್ಲಿರುವ ಪುರಸಭೆ ನಾಲ್ಕು ಎಕರೆ ಜಾಗೆಯಲ್ಲಿ ಉದ್ಯಾನವನ ಹಾಗೂ ಸರ್ಕಾರಿ ಕಚೇರಿಗಳ ಕಟ್ಟಡಗಳನ್ನು ನಿರ್ಮಾಣ ಮಾಡುವುದು. ಹಿಂದು ರುದ್ರಭೂಮಿಅಭಿವೃದ್ಧಿ ಪಡಿಸುವುದು, ಪಾಳುಬಿದ್ದ ಹಳೆಯ ಸರ್ಕಾರಿ ಆಸ್ಪತ್ರೆ ಕಟ್ಟಡದಲ್ಲಿ ಎರಡು ಅಂತಸ್ತಿನ ಕಟ್ಟಡ ನಿರ್ಮಿಸಿ ಸರ್ಕಾರಿ ಕಚೇರಿಗಳಿಗೆ ಅವಕಾಶ ಕಲ್ಪಿಸುವುದು, ಪಟ್ಟಣಕ್ಕೆ ಒಳಚರಂಡಿ(ಯುಜಿಡಿ)ಯೋಜನೆ ಅನುಷ್ಠಾನಗೊಳಿಸುವ ಕಾಮಗಾರಿಯ ನೀಲಿನಕ್ಷೆ ತಯಾರಿಸಲಾಗಿದ್ದು, ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಶೀಘ್ರ ಈ ಕಾಮಗಾರಿಗಳನ್ನು ಅನುಷ್ಟಾನಗೊಳಿಸಬೇಕು ಎಂದು ಒತ್ತಾಯಿಸಿದರು.

# ಮಹಾಲಿಂಗಪುರ ಸಂಭ್ರಮದ ಬಕ್ರೀದ್ ಹಬ್ಬದ ಆಚರಣೆ



**ಮಹಾಲಿಂಗಪುರ :** ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಸೋಮವಾರ ಪಟ್ಟಣದ ಇಸ್ಲಾಂ ಬಾಂಧವರು ಶೃದ್ಧಾ ಭಕ್ತಿಯಿಂದ ಆಚರಿದರು.

ಹಲವಾರು ಮುಸ್ಲಿಂ ಜಮಾತುಗಳ ಸಾವಿರಾರು ಜನರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಶೃದ್ಧಾಕೇಂದ್ರವಾದ ಕೆಂಗೇರಿಮಡ್ಡಿಯ ಈದ್ಗಾ ಮೈದಾನಕ್ಕೆ ಆಗಮಿಸಿದರು. ಈ ಸಮಯದಲ್ಲಿ ಮೌಲಾನಾ ಜುಬೇರಸಾಹೇಬ ಅವರು ಜನತೆಗೆ ಬಕ್ರೀದ್ ಹಬ್ಬದ ಮಹತ್ವವನ್ನು ತಿಳಿಸಿ, ಸಾಮೂಹಿಕ ಪ್ರಾರ್ಥನೆಯನ್ನು ಭೋದಿಸಿದರು. ನಂತರ ಸರ್ವ ಶಕ್ತನಿಗೆ ನಮಾಜ್ (ಪ್ರಾರ್ಥನೆ) ಸಲ್ಲಿಸಿ, ಉತ್ತಮ ಮಳೆ, ಬೆಳೆ, ಹಾಗೂ ವಿಶ್ವದ ಮೂಲೆ ಮೂಲೆಯಲ್ಲಿ ವಾಸಿಸುತ್ತಿರುವ ಎಲ್ಲ ಸಮುದಾಯಗಳಲ್ಲಿ ಶಾಂತಿ ನೆಲೆಸುವಂತೆ ಅಲ್ಲಾಹ (ದೇವರು)ನಲ್ಲಿ ಪ್ರಾರ್ಥಿಸಿದರು.

ಬಕ್ರೀದ್ ಹಬ್ಬದ ಪ್ರಾರ್ಥನೆಗಾಗಿ ಮುಸ್ಲಿಂ ಬಾಂಧವರು ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು ಹೊಸ ಬಟ್ಟೆಗಳನ್ನು ತೊಟ್ಟು, ತಮ್ಮ ಪರಿವಾರದ ಸದಸ್ಯರೊಂದಿಗೆ ಆಗಮಿಸಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ನಂತರ ತಮ್ಮ ಹಿಂದೂ ಮುಸ್ಲಿಂ ಗೆಳೆಯರನ್ನು ಭೇಟಿ ಮಾಡಿ ಪರಸ್ಪರ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಮುಸ್ಲಿಂ ಸಮಾಜದ ಹಿರಿಯರಾದ ಸಜನಸಾಬ ಪೆಂಡಾರಿ, ಮೌ.ಜಕ್ರೀಯಾಸಾಹಬ, ನಜೀರ್ ಅತ್ತಾರ, ದಾವಲಸಾಬ ನಗಾರ್ಚಿ, ಜಮೀರ ಯಕ್ಸಂಬಿ, ಮೀರಾ ತಟಗಾರ, ನಜೀರ್ ಝಾರೆ, ಮಿರ್ಜಾಸಾಬ ಚಿಕ್ಕೋಡಿ, ಸೈಯದ ಯಾದವಾಡ, ಅಬ್ದುಲ್ ಬಾಗವಾನ, ಮುಸ್ತಾಕ ಚಿಕ್ಕೋಡಿ, ಬಿ.ಎಂ.ಯಾದವಾಡ, ನಬಿ ಯಕ್ಸಂಬಿ, ಗಫೂರಸಾಬ ಆಲಗೂರ, ಬಂದೇನವಾಜ್ ಸಿಂದಗಿ, ಸಿಕಂದರ ಮೋಪಗಾರ, ರಫೀಕ್ ಜಂಗಿ, ಸುಲ್ತಾನ್ ನದಾಫ್, ಮೇಹಬೂಬ ಜೀರಗಾಳ, ಸಿರಾಜ್ ಪೆಂಡಾರಿ, ಮಹಮದ ಪೆಂಡಾರಿ, ದಾದಾ ಕರೋಶಿ, ಹುಮಾಯೂನ ಸುತಾರ ಸೇರಿದಂತೆ ಸಾವಿರಾರು ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.

# ಟಗರಿನ ಕಾಳಗ: 50 ಕ್ಕೂ ಹೆಚ್ಚು ಟಗರುಗಳ ತಾಕತ್ತು ಪ್ರದರ್ಶನ



**ರಬಕವಿ :** ಹನುಮಂತ ದೇವರ ಓಕುಳಿ ನಿಮಿತ್ಯ ಟಗರುಗಳ ಕಾಳಗ ಇಲ್ಲಿಯ ಹೊಸ ಬಸ್ ನಿಲ್ದಾಣದ ಹತ್ತಿರದ ರಾಮಪ್ಪ ಚಿಕ್ಕೋಡಿ ಆಟದ ಮೈದಾನದಲ್ಲಿ ನಡೆಯಿತು.

ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಿಂದ ಐವತ್ತಕ್ಕೂ ಹೆಚ್ಚು ಟಗರುಗಳು ಕಾದಾಟದಲ್ಲಿ ಪಾಲ್ಗೊಂಡಿದ್ದವು. ಹಾಲು ಹಲ್ಲು , 2 ಹಲ್ಲು , 4, 6 ಮತ್ತು 8 ಹಲ್ಲುಗಳ ಟಗರುಗಳು ಕಾಳಗದಲ್ಲಿ ತಲೆಗೆ ತಲೆ ಕೊಟ್ಟು ಶಕ್ತಿ ಪ್ರದರ್ಶನ ನೀಡಿದವು. ಅಲ್ಲದೆ ಒಂದಕ್ಕೊಂದು ಗುದ್ದುವುದರ ಮೂಲಕ ಕಾಳಗ ನಡೆಸಿ ನೆರೆದಿದ್ದ ನೂರಾರು ಜನರ ಮೈ ನವಿರೇನುವಂತೆ ಮಾಡಿದವು. ಪ್ರೇಕ್ಷಕರು ಟಗರು ಕಣದೊಳಗೆ ಬಾರದಂತೆ ಬ್ಯಾರಿಕೇಡ್ಡಗಳನ್ನು ಹಾಕಲಾಗಿತ್ತು. ಕಾಲು ಕೆರೆದು ಮುನ್ನುಗ್ಗಿ ಪರಸ್ಪರ ಮುಖಾಮುಖಿ ಡಿಕ್ಕಿ ಹೊಡೆಯುತ್ತಿರುವ ಟಗರುಗಳು, ಧೂಳಿನ ಅಬ್ಬರದಲ್ಲಿ ಟಗರುಗಳನ್ನು ನಿಯಂತ್ರಿಸುವ ಮಾಲೀಕರು, ಕೇಕೆ ಹೊಡೆಯುವ ಜನ, ಶಿಳ್ಳೆ , ಕೂಗು, ಚಪ್ಪಾಳೆ ತಟ್ಟುತ್ತಾ ಹುರಿದುಂಬಿಸುವ ಝುಲಕ್ ನೋಡ್ತಾ ಇದ್ರೆ ಮೈ ರೋಮಾಂಚನಗೊಳ್ಳುತ್ತಿತ್ತು.

**ಜನಸಾಗರ :** ಟಗರು ಕಾಳಗ ಕಣ್ತುಂಬಿಕೊಳ್ಳಲು ಈ ಮೈದಾನದತ್ತ ಜನಸಾಗರವೇ ಹರಿದು ಬಂದಿತ್ತು. ಟಗರಿನ ಶಕ್ತಿ ಪ್ರದರ್ಶನ ನೋಡಿದ ಪ್ರೇಮಿಗಳು ಕುಣಿದು ಕುಪ್ಪಳಿಸಿದರು.


ಟಗರಿಗಿದ್ದ ಹೆಸರು: ಹಂಟಿಂಗ್ ಅಪ್ಪು, ಪವರ್ ಸ್ಟಾರ್ ಕರಿಯ, ಕ್ರಾಂತಿವೀರ ರಾಯಣ್ಣ , ದುರ್ಗದ ಹುಲಿ, ಮಾರಿ ಹೀಗೆ ಹತ್ತಾರು ಹೆಸರುಗಳನ್ನು ಇಟ್ಟುಕೊಂಡ ಟಗರು ಸ್ಪರ್ಧೆಯಲ್ಲಿ ಸೆಣಸಾಟ ನಡೆಸಿದ್ದು ಕಾಳಗ ನೋಡಲು ಜನಸಂದಣಿ ಸೇರಿತ್ತು. ವಿಜೇತ ಟಗರು ಮಾಲಿಕರಿಗೆ ಪ್ರಶಸ್ತಿ, ಢಾಲ್ ಹಾಗು ನಗದು ಬಹುಮಾನ ಏರ್ಪಡಿಸಲಾಗಿತ್ತು.

ಹಿರಿಯರಾದ ಮಾರುತಿ ನಾಯಕ, ಬಾಲಚಂದ್ರ ಉಮದಿ, (ಅಣ್ಣನವರು) ಶಂಕರ ಪಾಟೀಲ, ಈರಣ್ಣ ಗುಣಕಿ, ಮಹಾದೇವ ಪಾಲಭಾಂವಿ, ವಲ್ಲಿಸಾಬ ಹುಡೇದಮನಿ, ಬೆಕ್ಕೇರಿ, ಮಹಾದೇವ ತುರಾದಿ, ಹನಮಂತ ಪೂಜಾರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಡಿಪ್ಲೋಮಾ ಪ್ರವೇಶ: ಅವಧಿ ವಿಸ್ತರಣೆ

**ಬಾಗಲಕೋಟೆ :** ನವನಗರದ ಸರ್ಕಾರಿ ಪಾಲಿಟೆಕ್ನಿಕ್ ಪ್ರಸಕ್ತ ವರ್ಷದ ಡಿಪ್ಲೋಮಾ ಪ್ರಥಮ ವರ್ಷದ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ರಷ್ಟು ಅಂಕ ಪಡೆದು ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ ಜೂನ್ 29 ವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊನಂ.8050226874, 9480440735ಗೆ ಸಂಪರ್ಕಿಸುವಂತೆ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರ್ಧದಷ್ಟು ಭರ್ತಿಯಾದ ಹಿಪ್ಪರಗಿ ಜಲಾಶಯ



**ರಬಕವಿ-ಬನಹಟ್ಟಿ :** ತಾಲ್ಲೂಕಿನ ಹಿಪ್ಪರಗಿ ಜಲಾಶಯಕ್ಕೆ ಮಂಗಳವಾರ ಬೆಳಿಗ್ಗೆ 12.7 ಸಾವಿರ ಕ್ಯೂಸೆಕ್ ಒಳ ಹರಿವು ಇದ್ದು,

ಒಟ್ಟು 6 ಟಿಎಂಸಿ ನೀರಿನ ಸಾಮರ್ಥ್ಯವನ್ನು ಹೊಂದಿರುವ ಜಲಾಶಯದಲ್ಲಿ ಸದ್ಯ 3.50 ಟಿಎಂಸಿಯಷ್ಟು ನೀರಿನ ಸಂಗ್ರಹವಿದೆ. ನೀರಿನ ಮಟ್ಟ 522 ಮೀಟರನಷ್ಟಿದೆ.

ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸಾಕಷ್ಟು ಪ್ರಮಾಣದ ಮಳೆಯಾಗುತ್ತಿದೆ. ಸದ್ಯಕ್ಕೆ ಕೃಷ್ಣಾ ನದಿಗೆ ಯಾವುದೇ ತರಹದ ಪ್ರವಾಹದ ಭೀತಿಯಿಲ್ಲ. ಆದರೂ ನದಿ ತೀರದ ಜನರು ತಾವಾಗಲಿ ತಮ್ಮ ಜಾನುವಾರುಗಳನ್ನಾಗಲಿ ನದಿ ತೀರಕ್ಕೆ ತೆಗೆದುಕೊಂಡು ಹೋಗಬಾರದು. ಈ ದಿಶೆಯಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ ಎಂದು ಸಹಾಯಕ ಅಭಿಯಂತರ ವಿ. ಎಸ್. ನಾಯಕ ತಿಳಿಸಿದರು.

# ಉತಾರಾ ಕೊಡುವಲ್ಲಿ ವಿಲಂಬ: ನಗರಸಭೆ ಸದಸ್ಯರಿಂದ ಪ್ರತಿಭಟನೆ

## ಉತಾರೆಗಳಿಗಾಗಿ ಪರದಾಡುತ್ತಿರುವ ಸಾರ್ವಜನಿಕರು । ಮುಂದಿನ ದಿನಗಳಲ್ಲಿ ರಸ್ತೆ ತಡೆ ಮಾಡಿ ಪ್ರತಿಭಟನೆ

## ಜಿಲ್ಲಾಧಿಕಾರಿಗಳು ನಗರಸಭೆಗೆ ಆಗಮಿಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಲಿ



**ರಬಕವಿ-ಬನಹಟ್ಟಿ :** ಕಳೆದೊಂದು ವರ್ಷದಿಂದ ಮನೆ ಉತಾರಾ ಒದಗಿಸುವಲ್ಲಿ ರಬಕವಿ-ಬನಹಟ್ಟಿ ನಗರಸಭೆಯಲ್ಲಿ ಅತೀವ ವಿಲಂಬವಾಗುತ್ತಿರುವುದನ್ನು ವಿರೋಧಿಸಿ ಬಿಜೆಪಿ ಸದಸ್ಯರು ದಿಢೀರ್ ಪ್ರತಿಭಟನೆ ನಡೆಸಿದ ಘಟನೆ ಜೂನ್ 18 ರಂದು ನಡೆಯಿತು.

ನಗರಸಭೆಯ ಪೌರಾಯುಕ್ತರ ಚೇಂಬರ್ ಮುಂಭಾಗದಲ್ಲಿ ಒಂದು ಗಂಟೆಗೂ ಅಧಿಕ ಕಾಲ ಪ್ರತಿಭಟನೆ ನಡೆಸಿದ ಸದಸ್ಯರು ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸುವಲ್ಲಿ ನಗರಸಭೆ ಸಂಪೂರ್ಣ ವಿಫಲಗೊಂಡಿದೆ ಎಂದು ಸಾಮೂಹಿಕವಾಗಿ ಪ್ರತಿಭಟಿಸಿದರು.

ನಂತರ ಪೌರಾಯುಕ್ತ ಜಗದೀಶ ಈಟಿ ಕಛೇರಿಗೆ ಆಗಮಿಸುತ್ತಿದ್ದಂತೆ ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದ ಸದಸ್ಯರು ಪೌರಾಯುಕ್ತ ಹಾಗು ಸಿಬ್ಬಂದಿಗಳ ವಿರುದ್ಧ ಹರಿಹಾಯ್ದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ, ಮಾಜಿ ನಗರಾಧ್ಯಕ್ಷ ಶ್ರೀಶೈಲ ಬೀಳಗಿ ಮಾತನಾಡಿ, ರಬಕವಿ ಬನಹಟ್ಟಿ ನಗರಸಭೆಯಲ್ಲಿ ಉತಾರೆಗಳನ್ನು ಪೂರೈಸುವಲ್ಲಿ ಬಹಳ ದಿನಗಳಿಂದ ಸಮಸ್ಯೆ ನಡೆದಿತ್ತು. ಈ ಕುರಿತು ಪೌರಾಯುಕ್ತರನ್ನು ಕೇಳಿದಾಗ, ನಮಗೆ ಹೈಕೋರ್ಟ್ ಆದೇಶವಿರುವುದರಿಂದ ಮ್ಯಾನ್ಯುಯಲ್ ಉತಾರೆಗಳನ್ನು ಪೂರೈಸಲು ಸಾಧ್ಯವಿಲ್ಲ ಎಂದು ಹೇಳಿದ್ದರು. ನಗರಸಭೆಯಲ್ಲಿ ಆನ್ ಲೈನ್ ಉತಾರೆಗಳನ್ನು ಪೂರೈಸಲು ಅರ್ಜಿ ಸಲ್ಲಿಸಿ ಎರಡು ತಿಂಗಳಾದರೂ ಇಲ್ಲಿಯ ಅಧಿಕಾರಿಗಳು ಉತಾರೆಗಳನ್ನು ಪೂರೈಸುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ ನಾವು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೇವೆ. ತೇರದಾಳ, ಮಹಾಲಿಂಗಪುರ ಪುರಸಭೆಯವರು ಮತ್ತು ಮುಧೋಳದ ನಗರಸಭೆಯವರು ಆನ್ ಲೈನ್ ಮತ್ತು ಮ್ಯಾನ್ಯುಯಲ್ ಉತಾರೆಗಳನ್ನು ಪೂರೈಸುತ್ತಿರುವಾಗ ನಮ್ಮಲ್ಲಿ ಈ ಸೌಲಭ್ಯ ಯಾಕೆ ಇಲ್ಲ ಎಂದು ಪೌರಾಯುಕ್ತರನ್ನು ಪ್ರಶ್ನಿಸಿದರು. ಈ ಕುರಿತು ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ನಗರಸಭೆಯ ಮತ್ತೋರ್ವ ಮಾಜಿ ನಗರಾಧ್ಯಕ್ಷ ಸಂಜಯ ತೆಗ್ಗಿ ಮಾತನಾಡಿ, ಜಿಲ್ಲಾಧಿಕಾರಿಗಳು ಕೂಡಲೇ ನಗರಸಭೆಗೆ ಆಗಮಿಸಿ ಇಲ್ಲಿಯ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಗಮನ ನೀಡಬೇಕು. ಒಂದು ವಾರದೊಳಗಾಗಿ ಉತಾರೆ ಪೂರೈಸುವ ಕಾರ್ಯ ಸಮರ್ಪಕವಾಗಿ ನಡೆಯದೇ ಇದ್ದರೆ, ಮುಂದಿನ ದಿನಗಳಲ್ಲಿ ನಗರಸಭೆಯ ಮುಂಭಾಗದಲ್ಲಿಯ ರಬಕವಿ ಬನಹಟ್ಟಿ ನಗರದಲ್ಲಿಯ ರಸ್ತೆ ತಡೆ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಯುನುಸ್ ಚೌಗಲಾ, ಚಿದಾನಂದ ಹೊರಟ್ಟಿ, ಅರುಣ ಬುದ್ನಿ, ಯಲ್ಲಪ್ಪ ಕಟಗಿ, ರವಿ ಕೊರ್ತಿ, ಜಯಶ್ರೀ ಬಾಗೇವಾಡಿ, ದುರ್ಗವ್ವ ಹರಿಜನ, ಅಶೋಕ ಭೋಸ್ಲೆ , ಶಂಕರ ಅಂಗಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಆನ್ ಲೈನ್ ಉತಾರೆಗಳನ್ನು ನೀಡಬೇಕು ಎಂದು ಸರ್ಕಾರ ಎಂಟು ವರ್ಷಗಳ ಹಿಂದೆ ಆದೇಶ ಮಾಡಿತ್ತು. ಈಗ ಸಾರ್ವಜನಿಕರ ಅನುಕೂಲಕ್ಕಾಗಿ ತಾತ್ಕಾಲಿಕವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಮನೆ ಮತ್ತು ಅಂಗಡಿಗಳ ಮಾಲಿಕರು ಸೂಕ್ತ ದಾಖಲೆಗಳನ್ನು ನೀಡಿ ನಗರಸಭೆಗೆ ಸಹಕರಿಸಬೇಕು ಎಂದು ಪೌರಾಯುಕ್ತ ಜಗದೀಶ ಈಟಿ ಮನವಿ ಮಾಡಿಕೊಂಡರು.

# ರೇಣುಕಸ್ವಾಮಿ ಕೊಲೆ ಖಂಡನೀಯ: ಆರೋಪಿತರಿಗೆ ಕಠಿಣ ಶಿಕ್ಷೆ ವಿಧಿಸಲು ಕ್ರಮ



**ರಬಕವಿ-ಬನಹಟ್ಟಿ :** ಚಲನಚಿತ್ರ ನಟ ದರ್ಶನ ಮತ್ತು ಆತನ ಗೂಂಡಾ ಸಂಗಡಿಗರು ಸೇರಿಕೊಂಡು ಚಿತ್ರದುರ್ಗದ ರೇಣುಕಸ್ವಾಮಿಯನ್ನು ಕೊಲೆ ಮಾಡಿರುವುದು ಖಂಡನೀಯವಾಗಿದೆ. ಆದ್ದರಿಂದ ಆರೋಪಿತರಿಗೆ ಕಠಿಣ ಶಿಕ್ಷೆಯನ್ನು ನೀಡಬೇಕು ಎಂದು ರಬಕವಿಯ ಜಂಗಮ ದೈವ ಮಂಡಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ. ಎಸ್. ಅಮ್ಮಣಗಿಮಠ ಆಗ್ರಹಿಸಿದರು.

ಮಂಗಳವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆಮನವಿಸಲ್ಲಿಸಿಅವರುಮಾತನಾಡಿದರು. ರೇಣುಕಸ್ವಾಮಿಯವರ ಕೊಲೆಯಿಂದಾಗಿ ಅವರ ಕುಟುಂಬ ವರ್ಗಕ್ಕೆತುಂಬಲಾರದನಷ್ಟವಾಗಿದೆ.ಅವರ ಕುಟುಂಬಕ್ಕೂ ಸೂಕ್ತ ಪರಿಹಾರ ನೀಡುವ ನಿಟ್ಟಿನಲ್ಲಿ ಸರ್ಕಾರ ಗಮನ ನೀಡಬೇಕು. ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಆರೋಪಿತರಿಗೆ ಕಠಿಣ ಶಿಕ್ಷೆಯನ್ನುನೀಡಬೇಕು ಎಂದು ಅಮ್ಮಣಗಿಮಠ ತಿಳಿಸಿದರು.

ಶಂಭುಲಿಂಗಯ್ಯ ಹಿರೇಮಠ, ಶಿವಾನಂದ ಬಾಗಲಕೋಟಮಠ, ಸಂಜಯ ಅಮ್ಮಣಗಿಮಠ, ಶಿವಾನಂದ ಮಠದ, ಮಹಾದೇವ ಮಠಪತಿ, ಶಿವಾನಂದ ಚಿಕ್ಕಮಠ, ಚಿದಾನಂದ ಅಮ್ಮಣಗಿಮಠ, ನಂದಯ್ಯಗೋಳ, ಭೀಮು ಮಠಪತಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.



ಸನ್ಮಾನ... ಮಹಾಲಿಂಗಪುರ : ಪಟ್ಟಣದ ಕೆಜಿಎಸ್ ಕ್ಲಸ್ಟರಿನ ಸಿಆರ್‌ಪಿಯಾಗಿ 7 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಇತ್ತೀಚೆಗೆ ಹುದ್ದೆಯಿಂದ ನಿರ್ಗಮಿಸಿದ ಎಸ್.ಎನ್.ಬ್ಯಾಳಿ ಅವರನ್ನು ಸ್ಥಳೀಯ ಜೆಸಿ ಶಾಲೆಯ ವತಿಯಂದ ಸನ್ಮಾನಿಸಿ ಬೀಳ್ಕೊಡಲಾಯಿತು.ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ, ಮುಖ್ಯೋಪಾಧ್ಯಾಯ ಎಸ್.ಜಿ.ಕೌಜಲಗಿ, ಶಿಕ್ಷಕರು, ಮಕ್ಕಳು ಇದ್ದರು.



**ಸಚಿವ ಜಾರಕಿಹೊಳಿಯವರಿಗೆ ಸನ್ಮಾನ**

ಮಹಾಲಿಂಗಪುರ: ಸಚಿವ ಸತೀಶ ಜಾರಕಿಹೊಳಿ ಅವರನ್ನು ಅವರ ಗೋಕಾಕ ನಿವಾಸದಲ್ಲಿ ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಹಾಗೂ ಮುಖಂಡರು ಸನ್ಮಾನಿಸಿ ಗೌರವಿಸಿದರು. ಮಲ್ಲಪ್ಪ ಸಿಂಗಾಡಿ, ಭೀಮಸಿ ಮಗದುಮ್ ಸೇರಿದಂತೆ ಹಲವರು ಇದ್ದರು.



**ನೂತನ ಸಂಸದರಿಗೆ ಸನ್ಮಾನ**

ಮಹಾಲಿಂಗಪುರ: 5ನೇ ಬಾರಿಗೆ ಆಯ್ಕೆಯಾದ ಬಾಗಲಕೋಟೆ ಸಂಸದ ಪಿ.ಸಿ.ಗದ್ದಿಗೌಡರ ಅವರನ್ನು ಬದಾಮಿಯ ಅವರ ನಿವಾಸದಲ್ಲಿ ರನ್ನಬೆಳಗಲಿ ಪಟ್ಟಣದ ಬಿಜೆಪಿ ಮುಖಂಡರು ಸನ್ಮಾನಿಸಿ ಗೌರವಿಸಿದರು. ಸಿದ್ದುಗೌಡ ಪಾಟೀಲ, ಮಲ್ಲು ಕ್ವಾನ್ಯಾಗೋಳ, ಶಿವನಗೌಡ ಪಾಟೀಲ, ಮಹಾಲಿಂಗಪ್ಪ ಲಾಗದವರ ಸೇರಿದಂತೆ ಹಲವರು ಇದ್ದರು.



**ಗಮನ ಸೆಳೆದ ಮುಸ್ಸಂಜೆ ಮೋಡಗಳ ಚಿತ್ತಾರ**

ಮಹಾಲಿಂಗಪುರ : ರವಿವಾರ ಸಂಜೆ ಮುಸ್ಸಂಜೆಯ ಸೂರ್ಯಾಸ್ತದ ವೇಳೆ ಆಕಾಶದಲ್ಲಿ ಕಾಣಿಸಿದ ಮೋಡಗಳ ಚಿತ್ತಾರಗಳು ಎಲ್ಲರ ಗಮನ ಸೆಳೆದವು. ಪಟ್ಟಣದ ಹವ್ಯಾಸಿ ಛಾಯಾಗ್ರಾಹಕ ಅಶ್ವಿನ ಪಟೇಲ್ ರಮಣಿ ಅವರ ಕ್ಯಾಮರಾದಲ್ಲಿ ಸೆರೆಯಾದ ಚಿತ್ರ.

### ಬಣಜಿಗ ಸಮಾಜದ ಪ್ರತಿಭೆಗಳಿಗೆ ಪುರಸ್ಕಾರ ಸಮಾರಂಭ

# ದೇಶದ ಸಂಸ್ಕೃತಿಯನ್ನು ಜಗತ್ತಿಗೆ ತಿಳಿಸುವ ಕೆಲಸ ಮಾಡಿ

**ತೇರದಾಳ** : ಶಿಕ್ಷಣದಲ್ಲಿ ಆಂಗ್ಲ ಭಾಷೆ ಹೊಂದಿ. ಆದರೆ ಆಂಗ್ಲ ಭಾಷೆ ಕಲಿತು ಜಗತ್ತಿಗೆ ನಮ್ಮ ಭಾರತ ದೇಶದ ಸಂಸ್ಕೃತಿಯನ್ನು ತಿಳಿಸುವ ಕೆಲಸ ಮಾಡಿ ಎಂದು ಹಳಿಂಗಳಿ ಕಮರಿಮಠದ ಶರಣಬಸವ ದೇವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಇಲ್ಲಿನ ಬಣಜಿಗ ಕ್ಷೇಮಾಭಿವ?ದ್ಧಿ ಸಂಘ ಭಾನುವಾರ ಮಲ್ಲಿಕಾರ್ಜುನ ದೇವಸ್ಥಾನ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯು ದಲ್ಲಿ ಸಾಧನೆಗೈದ ಸಮಾಜದ ಪ್ರತಿಭೆಗಳಿಗೆ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯವೋ ಸಂಸ್ಕಾರವು ಅಷ್ಟೇ ಮುಖ್ಯ. ಆ ದಿಸೆಯಲ್ಲಿ ಪಾಲಕರು ಜಾಗೃತರಾಗಬೇಕೆಂದು ಹೇಳಿದರು. ಬಿ.ಡಿ. ಜತ್ತಿ ಪೌಂಡೇಶನ್ ಅಧ್ಯಕ್ಷ ದ್ರುವ ಜತ್ತಿ ಮಾತನಾಡಿ, ಸಮಾಜದಲ್ಲಿ ಸಂಘಟನೆ ಹಾಗೂ ಸ್ವಾಭಿಮಾನ ಬಹಳ ಮುಖ್ಯ. ಬಣಜಿಗ ಸಮಾಜದ ಕೊಡುಗೆ ಸಾಕಷ್ಟು ಇದೆ. ಸಮಾಜದ ಪ್ರತಿಭೆಗಳಿಗಾಗಿ ಜತ್ತಿ ಪೌಂಡೇಶನ್ ಯಾವತ್ತು ನಿಮ್ಮ ಜೊತೆ ಇರುತ್ತದೆ ಎಂದು ಅಭಯ ನೀಡಿದರು.

ಜಮಖಂಡಿ ಅರ್ಬನ್ ಬ್ಯಾಂಕ್ ನಿರ್ದೇಶಕಿ ವೈಶಾಲಿ ಆನಂದ ಗೊಂದಿ, ಇಂದು ಶಿಕ್ಷಣ ಜಾಗತಿಕ ಮಟ್ಟದಲ್ಲಿ ತನ್ನದೆಯಾದ ಸದ್ದು ಮಾಡುತ್ತಿದೆ. ಜಗತ್ತಿನ ಹಲವು ರಾಷ್ಟ್ರಗಳಲ್ಲಿ ನಮ್ಮ ಭಾರತೀಯರು ರಾಯಭಾರ ಮಾಡುತ್ತಿದ್ದರೆ ಅದಕ್ಕೆ ಶಿಕ್ಷಣವೇ ಕಾರಣ. ಆದ್ದರಿಂದ ಸಮಾಜದವರು ಮಕ್ಕಳಿಗೆ ಕಡ್ಡಾಯವಾಗಿ ಗುಣಮಟ್ಟದ ಮತ್ತು ಉನ್ನತ ಶಿಕ್ಷಣ ನೀಡುವಂತೆ ಹೇಳಿದರು.

ಸುರೇಶ ಮುಚ್ಚಂಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಸಮಾಜಕ್ಕೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ಮಹನೀಯರಿಗೆ ಸಮಾಜದ ವತಿಯಿಂದ ಸತ್ಕರಿಸಿ ಗೌರವಿಸಲಾಯಿತು. ಸ್ಥಳೀಯ ಬಣಜಿಗ ಸಮಾಜದ ಅಧ್ಯಕ್ಷ ರಮೇಶ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಗೌರವ ಅಧ್ಯಕ್ಷ ಬಸವರಾಜ ಅವರಾದಿ, ಮಲ್ಲಿಕಾರ್ಜುನ ದೇವಸ್ಥಾನ ಜೀರ್ಣೋದ್ಧಾರ ಸೇವಾ ಸಮಿತಿ ಚೇರಮನ್ ಅಪ್ಪು ಮಂಗಸೂಳಿ ಇದ್ದರು. ಸಾನ್ವಿ ಸೊಟ್ಟಿ ಪ್ರಾರ್ಥಿಸಿದರು. ಗಿರೀಶ ಯಾದವಾಡ ಸ್ವಾಗತಿಸಿ ಪರಿಚಯಿಸಿದರು. ಶ್ರೀನಾಥ ಸೊಟ್ಟಿ ನಿರೂಪಿಸಿದರು. ಶಂಕರ ಮಂಗಸೂಳಿ ವಂದಿಸಿದರು.

# ನಗರದಲ್ಲಿ ಕಾರಿಗೆ ಹಗ್ಗ ಕಟ್ಟಿ ಜಗ್ಗುವ ಮೂಲಕ ಬಿಜೆಪಿಯಿಂದ ಪ್ರತಿಭಟನೆ

## ರಾಜ್ಯದಲ್ಲಿ ದರಿದ್ರ ಶನಿ ಸರಕಾರ ಗಂಟುಬಿದ್ದಿದ್ದು ಇದರ ಪತನ ಪ್ರಾರಂಭವಾಗಿದೆ: ಭಾಂಡಗೆ

**ಬಾಗಲಕೋಟೆ** : ರಾಜ್ಯಕ್ಕೆ ಜನವೀರೋಧಿ ಕಾಂಗ್ರೇಸ್ಸ ಎಂಬ ದರಿದ್ರ ಹಾಗೂ ಶನಿ ಸರಕಾರ ಗಂಟು ಬಿದ್ದಿದ್ದು ಸದ್ಯ ಸರಕಾರದ ಪತನ ಪ್ರಾರಂಭವಾಗಿದ್ದು ಬಹಳದಿನ ಈ ಸರಕಾರ ಆಡಳಿತದಲ್ಲಿ ಇರೋದಿಲ್ಲಾ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.



ಅವರು ನಗರ ಬಸವೇಶ್ವರ ವೃತ್ತದಲ್ಲಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಘಟಕ್ ದಿಂದ ರಾಜ್ಯ ಸರಕಾರದ ಬೆಲೆ ಏರಿಕೆ ವಿರೂದ್ದ ಹಮ್ಮಿಕೊಂಡ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಚುನಾವಣೆಯಲ್ಲಿ ಆಸೆಗಳೆಂಬ ಗ್ಯಾರಂಟಿಗಳನ್ನು ಜನತೆ ತೋರಿಸಿ, ಸುಳ್ಳು ಭರವಸೆಗಳನ್ನು ಕೋಟ್ಟು ಚುನಾವಣೆಯಲ್ಲಿ ಆರಸಿ ಬಂದ ನಂತರ ಕಾಂಗ್ರೆಸ್ಸ ಸರಕಾರ, ಎಲ್ಲ ರಂಗದಲ್ಲೂ ಎಲ್ಲ ಬೆಲೆ ಏರಿಕೆ ಮಾಡುತ್ತಿದೆ, ಕೇಂದ್ರ ಸರಕಾರ ಪೇಟ್ರೋಲ್,ಡಿಸೇಲ್ ಬೇಲೆ ಇಳಿಸಿದರೆ ಈ ಸಿದ್ರಾಮಯ್ಯನ ದರಿದ್ರ ಸರಕಾರ ಪೇಟ್ರೋಲ್,ಡಿಸೇಲ್ ಬೇಲೆ ಏರಿಸಿ ಸಾರ್ವಜನಿಕರ ಮೈಮೆಲೆ ಬರೆ ಏಳೆಯುವ ಕೆಲಸ ಮಾಡಿದೆ, ಬಿಟ್ಟಿ ಗ್ಯಾರಂಟಿಗಳನ್ನು ಜಾರಿಗೆ ತರುವ ಸಲುವಾಗಿ ಅನೇಕ ಬಡಪರ ಯೋಜನೆಗಳಿಗೆ ಕತ್ತರಿ ಹಾಕಿದ್ದಾರೆ, ರಾಜ್ಯದಲ್ಲಿರುವ ಕಾಂಗ್ರೆಸ್ಸ ಸರಕಾರ ಬಡವಿರೋಧಿ, ಜನವಿರೋಧ ಸರಕಾರವಾಗಿದೆ, ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಸರಕಾರ ಇದ್ದರೂ ಕೂಡಾ 140 ಕಾಂಗ್ರೇಸ್ಸ ಶಾಸಕರ ಕ್ಷೇತ್ರದಲ್ಲಿ ಕಾಂಗ್ರೇಸ ಸೋತಿದೆ, ಬಾಗಲಕೋಟೆ ಜಿಲ್ಲೆಯ 7 ಮತಕ್ಷೇತ್ರದಲ್ಲಿ ಕಾಂಗ್ರೆಸ್ಸ ಸೋತಿದೆ. ರಾಜ್ಯದಲ್ಲಿ ಆಕಸ್ಮೀಕವಾಗಿ ಬಂಡ ಸರಕಾರ, ಜನವಿರೋಧಿ ಸರಕಾರ ಬಹಳದಿನ ಆಡಳಿತದಲ್ಲಿ ಇರುದಿಲ್ಲಾ, ಆದಷ್ಟೂ ಬೇಗ ಸರಕಾರ ಪತನವಾಗಲಿದೆ.

ಬಿಜೆಪಿ ಜಿಲ್ಲಾಧ್ಯಕ ಶಾಂತಗೌಡ ಪಾಟೀಲ ಮಾತನಾಡಿ ಜನರಿಗೆ ಬೇಕಾಗುವ ಪ್ರತಿಯೊಂದು ಅಗತ್ಯ ವಸ್ತುವಿನ ಬೆಲೆಯನ್ನು ಏರಿಸಿರುವು ದರಿದ್ರ ಸಿದ್ರಾಮಯ್ಯ ಸರಕಾರ, ಜನರು ಇವರಿಗೆ ಛೀ ಮಾರಿ ಹಾಕುತ್ತಿದಾರೆ, ಬಡವರ ಮೇಲೆ ಬರೆಹಾಕುವ ಸರಕಾರ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ವಿಫಲವಾಗಿದೆ,

ನಿರಂತರ ಬೇಲೆ ಏರಿಕೆಯನ್ನು ಮಾಡುತ್ತಾ ಬಂದಿರುವ ಕಾಂಗ್ರೆಸ್ಸ ಸರಕಾರಕ್ಕೆ ಜನ ಛೀಮಾರಿ ಹಾಕಬೇಕು, ಈ ಬೆಲೆ ಏರಿಕೆಯನ್ನು ಬಿಜೆಪಿ ಜಿಲ್ಲಾ ಘಟಕ ಖಂಡಿಸುತ್ತದೆ ಎಂದರು.

ಇದಕ್ಕೂ ಮುಂಚೆ ಶ್ರೀ ಬಿಳೂರ ಅಜ್ಜನ ದೇವಸ್ಥಾನದಿಂದ ಬಸವೇಶ್ವರ ವೃತ್ತದ ವೆರಗೆ ನಡೆದ ಪ್ರತಿಭಟನಾ ಮೆರವಣಿಗೆಲ್ಲಿ ಎತ್ತಿನ ಚಕ್ಕಡಿ ಮೇಲೆ ಸ್ಕೋಟಿಯನ್ನು ಇಟ್ಟು ಮೆರವಣಿಗೆಯಲ್ಲಿ ಸಾಗಿದ್ದು ಒಂದು ಕಡೆಯಾದರೆ ಕಾರಿಗೆ ಹಗ್ಗ ಕಟ್ಟಿ ಕಾರನ್ನು ಏಳೆದುಕೋಡು ಬಂದಿದ್ದು ಎಲ್ಲರ ಗಮನ ಸೇಳೆಯಿತು, ಎಲ್ಲರೂ ತಮ್ಮ ದ್ವೀಚಕ್ರ ವಾಹನವನ್ನು ಏತ್ತಿಕೋಂಡು ಕೇಲವು ಒತ್ತಿಕೊಂಡು ಬಂದರೆ, ಕೆಲವರೂ ಸೈಕಲ್ ಮೇಲೆ ಬಂದು ಪ್ರತಿಭಟಿಸಿದರು.

ಪ್ರತಿಭಟನೆಯಲ್ಲಿ ಬದಾಮಿಯ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಬಸವರಾಜ ಯಂಕಂಚಿ, ಲಕ್ಷ್ಮೀ ನಾರಾಯಣ ಕಾಸಟ್, ಅಶೋಕ ಲಿಂಬಾವಳಿ, ರಾಜು ನಾಯ್ಕರ, ಮಲ್ಲಯ್ಯ ಮುಗನೂರ ಮಠ, ಸತ್ಯನಾರಾಯಣ ಹೆಮಾದ್ರಿ,ಮುತ್ತಣ್ಣ ಬೇಣ್ಣೂರ, ಶಿವಾನಂದ ಟವಳಿ, ಭಾಗಿರಥಿ ಪಾಟೀಲ.ಸವೀತಾ ಹೊಸುರ, ಗುಂಡುರಾವ ಶಿಂದೆ, ಸುರೇಶ ಕೊಣ್ಣೂರ, ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಚಂದ್ರು ಸರೂರ, ಚಂದ್ರುರಾಮವಾಡಗಿ, ಶಶಿಕಲಾ ಮಜ್ಜಗಿ, ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ, ಜಯಪ್ರಕಾಶ ನಾಗಠಾಣ, ಭುವನೇಶ್ವರ ಪೂಜಾರ, ಆನಂದ ಇಂಗಳಗಾವಿ, ಈರಣ್ಣ ಹಳೆಗೌಡರ, ಸಂಗಪ್ಪ ಸಜ್ಜನ, ಸಂಗಣ್ಣ ಶಿರೂರ, ರಾಮಣ್ಣ ಜುಮನಾಳ,ಚಂದ್ರಶೇಖರ ಉಕ್ಕಲಿ, ಮಾನೇಶ ಅಂಬಿಗೇರ, ಸೇರಿದಂತೆ ನಗರಸಭೆ ಸದಸ್ಯರು, ಜಿಲ್ಲಾ ಹಾಗೂ ನಗರ,ಗ್ರಾಮೀಣ ಪದಾಧೀಕಾರಗಳು,ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ವಿಶ್ವ ಪರಿಸರ ದಿನ ಆಚರಣೆ



**ವಿಜಯಪುರ** : ನಗರದ ಅಲ್ ಹಸ್ನಾತ ಸಂಸ್ಥೆಯ ಅಲ್ ಹಸ್ನಾತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಇಂದು ಸಸಿ ನೆಡುವ ಮೂಲಕ ಉದ್ಘಾಟನೆ ಮಾಡಿದ ಸಂಸ್ಥೆಯ ಅಧ್ಯಕ್ಷರಾದ ಅಲ್ ಹಾಜ್ ಜನಾಬ್ ಎಮ್ ಡಿ ರೂಗಿಯವರು ಮಕ್ಕಳ ಬದುಕು ಯಾವಾಗಲು ಸಸಿ ಮೃದುವಾಗಿರುತ್ತದೆ. ಮಕ್ಕಳು ಮುಂದೆ ಸಸಿಯಂತೆ ಬೆಳೆದು ಮರವಾಗಿ ಹಣ್ಣು ಕೊಡೋವರಿಗೂ ತಂದೆ ತಾಯಿಯ ಜವಾಬ್ದಾರಿಯಾಗಿದೆ.

ಮಕ್ಕಳಿಗೆ ಜ್ಞಾನ ನೀಡುವ ಈ ದೇಗುಲದಲ್ಲಿ ಪೂಜಾರಿಗಳಾದ ಶಿಕ್ಷಕರು ನಿರಂತರವಾಗಿ ಬೋಧಿಸುವ ಮೂಲಕ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯರಾದ ಡಾ.ಶಮಶರಲಿ ಮುಲ್ಲಾ ಮಾತನಾಡಿ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವನೆ ಬೆಳಿಸಬೇಕು ಎಂದು ಹೇಳಿದರು. ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ವಿವಿಧ ವಿಭಾಗಗಳಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಫರೀದ ಹರಿಯಾಲ ಮುಖ್ಯಗುರುಗಳು ಪ್ರಾಥಶಾಲೆ ವಿಭಾಗ, ಅಲ್ ಹಾಜ್ ಝಿಯಾಉಲ್ಲಹಕ್ ಅವಟಿ ಮುಖ್ಯಗುರುಗಳು ಪ್ರಾಥಮಿಕ ವಿಭಾಗ, ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ಸಿಇಓ ರಿಷಿ ಆನಂದ

**ವಿಜಯಪುರ** : ಮಾನವ ಸಂಕುಲದ ಬದುಕುಳಿಯುವಿಕೆಗೆ ಅವಶ್ಯವಿರುವ ಮೂಲಭೂತ ಅವಶ್ಯಕತೆಗಳನ್ನು ಪರಿಸರ ಒದಗಿಸುತ್ತದೆ. ಮಾನವನ ಯೋಗಕ್ಷೇಮಕ್ಕೆ ಅವಶ್ಯವಿರುವ ಎಲ್ಲಾ ಸಂಪನ್ಮೂಲಗಳು ಈ ಭೂಮಿಯ ಮೇಲಿದೆ. ಆದ್ದ-ರಿಂದ ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ರಿಷಿ ಆನಂದ ಹೇಳಿದರು.



ಜಿಲ್ಲಾ ಪಂಚಾಯತ ಹಾಗೂ ಸಮಾಜಿಕ ಅರಣ್ಯ ಇಲಾಖೆ ವಿಜಯಪುರ ಇವರ ಸಹಯೋಗದಲ್ಲಿ ವಿಜಯಪುರ ಜಿಲ್ಲಾ ಪಂಚಾಯತಿಯ ಆವರಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ "ವಿಶ್ವ ಪರಿಸರ ದಿನಾಚರಣೆ " ಕಾರ್ಯಕ್ರಮದಲ್ಲಿ ಗಿಡ ನೆಟ್ಟು, ನೀರುಣಿಸಿ ಅವರು ಮಾತನಾಡಿದರು.

ಪ್ರಕೃತಿ ಸಂಪನ್ಮೂಲವನ್ನು ನಮಗೆ ಅವಶ್ಯಕತೆ ಇದ್ದಷ್ಟು ಮಾತ್ರ ಉಪಯೋಗಿಸೋಣ, ಅವಶ್ಯಕತೆಗಿಂತ ಹೆಚ್ಚು ಉಪಯೋಗ ಮಾಡದೇ ನಮ್ಮ ಮುಂದಿನ ಪೀಳಿಗೆಗೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಅತೀ ಹೆಚ್ಚು ಬಿಸಿಲಿನ ತಾಪಮಾನ ಇರುವುದರಿಂದ ಸಸಿಗಳನ್ನು ನೆಡುವುದು ಹಾಗೂ ಜಲ ಸಂರಕ್ಷಣೆ ಮಾಡುವುದು ಅವಶ್ಯಕವಾಗಿದೆ. ಜಲಸಂರಕ್ಷಣೆಗೆ ಅತ್ಯಂತ ಸೂಕ್ತ ವಿಧಾನ "ಮಳೆನೀರು ಕೊಯ್ಲು" ಈ ವಿಧಾನವನ್ನು ನಾವು ಅಳವಡಿಸಿಕೊಂಡು ಸಾರ್ವಜನಿಕರಲ್ಲಿಯೂ ಜಾಗೃತಿ ಮೂಡಿಸಬೇಕು ಎಂದರು.

ಮಾನವ ಮಾತ್ರ ಪ್ರಕೃತಿಯ ವಿಚಾರದಲ್ಲಿ ನಿರ್ದಯವಾಗಿದ್ದಾನೆ. ಮಾನವರು ನೈಸರ್ಗಿಕ ಸಂಪನ್ಮೂಲವನ್ನು ದಿನೇ ದಿನೇ ಹಾಳುಗೆಡುವುತ್ತಿದ್ದಾರೆ. ಕಾಡುಗಳನ್ನು ಕಡಿದು ಮಾಲಿನ್ಯ ಹಾಗೂ ಜಾಗತಿಕ ತಾಪಮಾನ ಹೆಚ್ಚಲು ಕಾರಣರಾಗಿದ್ದಾ-ರೆ. ಇತ್ತೀಚಿನ ದಿನಗಳಲ್ಲಂತೂ ಪರಿಸರ ಹಾನಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದಕ್ಕೆ ಈ ವರ್ಷದ ಬಿಸಿಲಿಗಿಂತ ಉತ್ತಮ ಉದಾಹರಣೆ ಬೇಕಿಲ್ಲ. ಇನ್ನಾದರೂ ನಾವು ಎಚ್ಚೆತ್ತುಕೊಳ್ಳಬೇಕು. ಪರಿಸರವನ್ನು ರಕ್ಷಿಸುವ ಕಾಯಕದಲ್ಲಿ ಇಂದಿನಿಂದಲೇ ತೊಡಗಬೇಕು ಎಂದು ಕರೆ ನೀಡಿದರು.

ನಾವು ಪರಿಸರದ ಬಗ್ಗೆ ಜಾಗೃತರಾಗಿದ್ದ-ರೆ ಮಾತ್ರ ಸಾಲದು ಪ್ರಕೃತಿ ನಮಗೆ ಒದಗಿಸುತ್ತಿರುವ ಎಲ್ಲ ಅವಶ್ಯಕತೆಗಳಿಗೂ ನಾವು ಹೆಚ್ಚಿನ ಗೌರವ ಮತ್ತು ಕಾಳಜಿಯನ್ನು ನೀಡಬೇಕಾಗಿದೆ.

ಇದರ ಬಗ್ಗೆ ನಾವಷ್ಟೇ ಅಲ್ಲದೇ ಇತರರಿಗೂ ತಿಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ನಮ್ಮ ಪರಿಸರವನ್ನು ನಮಗೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೂ ಸಹ ದೊರಕುವಂತೆ ಮಾಡೋಣ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಠೆ, ಉಪಕಾರ್ಯದರ್ಶಿ ಬಿ. ಎಸ್. ಮೂಗನೂರಮಠ, ಯೋಜನಾ ನಿರ್ದೇಶಕ ಸಿ. ಆರ್. ಮುಂಡರಗಿ, ಸಾಮಾಜಿಕ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಬು ಚವ್ಹಾಣ, ವಲಯ ಅರಣ್ಯಾಧಿಕಾರಿ ಗಿರೀಶ ಹಲಕುಡೆ, ಸಹಾಯಕ ಕಾರ್ಯದರ್ಶಿ ಅನುಸೂಯಾ ಚಲವಾದಿ, ಯೋಜನಾ ಅಂ-ದಾಜು ಮತ್ತು ಮೌಲ್ಯಮಾಪನಾಧಿಕಾರಿ ಎ. ಬಿ ಅಲ್ಲಾಪೂರ, ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಾಯಿ ಹಾಗೂ ಜಿಲ್ಲಾ ಪಂಚಾಯತಿಯ ಹಾಗೂ ಸಮಾಜಿಕ ಅರಣ್ಯ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಸೋಲಿನ ಆತ್ಮಾವಲೋಕನ ಮಾಡುತ್ತೇವೆ: ಆಲಗೂರ

**ವಿಜಯಪುರ** : ಚುನಾವಣೆಯಲ್ಲಿ ನಾವು ಸೋತಿರಬಹದು. ಕಾರ್ಯತಂತ್ರ ಹಾಗೂ ಪ್ರಚಾರ ವಿಷಯದಲ್ಲಿ ನಾವು ಸೋತಿಲ್ಲ ಎಂದು ವಿಜಯಪುರ ಲೋಕಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರೀ-ಕ್ಷೆಗೆ ತಕ್ಕಂತೆ ಫಲಿತಾಂಶ ಬರಲಿಲ್ಲ. ಸೋಲಿನ ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ ಎಂದರು.

ನಾನು ಆಯ್ಕೆಯಾದರೆ ಜಾತಿ ನಿಂದನೆ ಕೇಸ್ ಅಧಿಕವಾಗುತ್ತವೆ ಎಂಬ ಅಪಪ್ರಚಾರ ಮಾಡಿದರು. ಇದು ಸಹ ಹಿನ್ನೆಡೆಗೆ ಕಾರಣ ಇರಬಹದು ಎಂದು ಆಲಗೂರ ಹೇಳಿದರು. ಜಿಲ್ಲೆಯ ಎಲ್ಲ ಕಾಂಗ್ರೆಸ್ ಕಾರ್ಯಕರ್ತರು, ಎಲ್ಲ ಶಾಸಕರು, ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದ ಎಲ್ಲ ಅಭ್ಯರ್ಥಿಗಳು ನನ್ನ ಪರವಾಗಿ ಅಪಾರವಾಗಿ ಶ್ರಮಿಸಿದ್ದಾರೆ, ಈ ಫಲವಾಗಿಯೇ ಆರು ಲಕ್ಷ ಜನ ನನಗೆ ಮತ ರೂಪದ ಆಶೀರ್ವಾದನೀಡಿದ್ದಾರೆ.ಸಂಸದರಮೇಶಜಿಗಜಿಣಗಿ ಅವರಿಗೆ ನಾನು ಅಭಿನಂದನೆ ಸಲ್ಲಿಸುವೆ, ಉತ್ತಮ ಕಾರ್ಯಗಳಿಗೆ ಸದಾ ಬೆಂಬಲ ನೀಡುವೆ ಎಂದರು. ಗ್ಯಾರಂಟಿ ಬಲದಿಂದ ಹೆಚ್ಚು ಮತ ನಿರೀಕ್ಷೆ ಇತ್ತು.



ಅದು ಹುಸಿಯಾಯಿತು. ವಿಜಯಪುರ ಜಿಲ್ಲೆಯಲ್ಲಿ ಹಿಂದೂತ್ವ ಅಲೆ, ಮೋದಿ ಅಲೆ ಸಹ ವ್ಯಾಪಕವಾಗಿತ್ತು. ಈ ಎಲ್ಲ ಕಾರಣಗಳಿಂದಾಗಿ ಸೋಲಾಗಿದೆ ಎಂದರು.

ಎಲ್ಲ ಶಾಸಕರು ನಮ್ಮ ಪರವಾಗಿ ಕೆಲಸ ಮಾಡಿದ್ದಾರೆ, ಎಲ್ಲರೂಒಗ್ಗಟ್ಟಾಗಿಯೇನನಗೆಟಿಕೆಟ್‌ದೊರಕಿಸಿದ್ದಾರೆ. ಕೆಪಿಸಿಸಿ ಉಸ್ತುವಾರಿ ರಣದೀಪಸಿಂಗ್ ಸುರ್ಜೇವಾಲಾ ಅವರು ನನಗೆ ಕರೆ ಮಾಡಿ ಮಾಹಿತಿ ಪಡೆದುಕೊಂಡಿ-ದ್ದಾರೆ. ಈ ಬಗ್ಗೆ ಒಂದು ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಿದ್ದು, ಇದನ್ನು ಶೀಘ್ರದಲ್ಲಿ ಸಲ್ಲಿಸುವೆ ಎಂದರು. ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ್ ಮುಶ್ರೀಫ್, ಮುಖಂಡರಾದ ವೈಜನಾಥ ಕರ್ಪೂರಮಠ, ಎಸ್.ಎಂ. ಪಾಟೀಲ ಗಣಿಗಾರ, ಸೋಮನಾಥ ಕಳ್ಳಿಮನಿ, ಡಾ.ಗಂಗಾಧರ ಸಂಬಣ್ಣಿ, ಚಾಂದಸಾಬ ಗಡಗಲಾವ, ಸಾಹೇಬಗೌಡ ಬಿರಾದಾರ ಮತ್ತಿತರರು ಇದ್ದರು.

# ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ಪಾಟೀಲ

**ತಾಳಿಕೋಟೆ**: ಪಟ್ಟಣದ ಶ್ರೀ ಸಂಗಮಾರ್ಯ ವಿದ್ಯಾಸಂಸ್ಥೆಯ ಆವರಣದಲ್ಲಿ ಬುಧವಾರರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು.



ಸಂಸ್ಥೆಯ ಅಧ್ಯಕ್ಷರಾದ ಎಚ್.ಎಸ್.ಪಾಟೀಲ ಅವರು ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ನಮ್ಮದೈನಂದಿನಕಾರ್ಯಚಟುವಟಿಕೆಗಳಲ್ಲಿ ಪರಿಸರಕ್ಕೆ ವಿರೂದ್ದವಾದ ಅನೇಕ ಕಾರ್ಯ ಚಟುವಟಿಕೆಗಳನ್ನು ಮಾಡುತ್ತಾ ಸಾಗಿದ್ದರ ಪರಿಣಾಮ ಇಂದು ಮಾನವನಿಗೆ ಪ್ರಕೃತಿಯಿಂದ ಅನೇಕ ತೊಂದರೆಗಳು ಬರತೊಡಗಿವೆ ನಾವು ಮಾಡುವ ಕೆಲಸದಲ್ಲಿ ಅನೇಕನಿರೂಪಯುಕ್ತವಸ್ತುಗಳಾದಪ್ಲಾಸ್ಟಿಕ್ ಕ್ಯಾರಿಬ್ಯಾಗ,ಮತ್ತುವಸ್ತುಗಳನ್ನುಎಲ್ಲೆಂದರಲ್ಲಿ ಬಿಸಾಕುತ್ತಾ ಸಾಗುತ್ತಿರುತ್ತೇವೆ ಆದರೆ ಅದು ನಮ್ಮಿಂದ ಆಗುತ್ತಿದ್ದರೂ ಕೂಡಾ ಅದು ನಮಗೆ ಗೊತ್ತಾಗುವದಿಲ್ಲಾ ಎತ್ತೆಚ್ಚವಾಗಿ ನಡೆದುಕೊಳ್ಳುತ್ತಾ ಸಾಗಿದೆ ಅದಕ್ಕಾಗಿ ನಾವು ಮೊದಲು ಪರಿಸರಕ್ಕೆ ಪೂರಕವಾದ ವಸ್ತುಗಳನ್ನು ನಾನು ಬಳೆಸುತ್ತೇನೆಂಬ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ ಕಾಲ ಕ್ರಮೇಣವಾಗಿ ಗಿಡಮರಗಳನ್ನು ಹಚ್ಚಿ ಬೆಳೆಸುವ ಬದಲು ಅವುಗಳನ್ನುಕಡಿದು ನಾಶ ಮಾಡುತ್ತಾ ಸಾಗಿದ್ದರ ಪರಿಣಾಮ ಬಿಸಿಲಿನ ಉಷ್ಣತೆ ಈ ಭಾರಿ 50 ಡಿಗ್ರಿ ಕ್ಕಿಂತಲೂ ಹೆಚ್ಚಿಗೆ ಕಂಡಿದ್ದೇವೆ ಇಂತಹ ಬಿಸಿಲಿನಿಂದ ಅನೇಕ ತೊಂದರೆಗಳನ್ನು ನಾವು ನೀವು ಅನುಭವಿಸಿದ್ದೇವೆ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಅಧಿಕವಾಗುತ್ತಿದೆ ಇದು ಹೀಗೇ ಮುಂದುವರೆದರೆ ಮುಂದೊಂದು ದಿನ ಮನುಕುಲದ ನಾಶವಾಗುವ ಕಾಲ ಸನ್ನಿತಕ್ಕೆ ನಾವೇ ತಂದುಕೊಂಡಂತಾಗಲಿದ್ದು ಅದಕ್ಕೆ ಪ್ರತಿಯೊಬ್ಬರು ಅರ್ಥೈಸಿಕೊಂಡು ಪ್ರಕೃತಿಗೆ ವಿರೂದ್ದವಾಗಿ ನಡೆದುಕೊಳ್ಳದೇ ಅದಕ್ಕೆ ಪೂರಕವಾದ ಸಸಿಗಳನ್ನು ಹೆಚ್ಚಿಗೆ ನೆಟ್ಟು ಅವುಗಳನ್ನು ಮಕ್ಕಳಂತೆ ಪಾಲನೆ ಪೋಷಣೆ ಮಾಡಿಮರಗಳನ್ನಾಗಿಪರಿವರ್ತಿಸುವಂತಹ ಕಾರ್ಯ ಮಾಡಬೇಕೆಂದರು.

ಈ ಕಾರ್ಯಕ್ರಮದಲ್ಲಿ ಎಸ್.ಎಸ್.ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸುನೀಲ. ಎಚ್.ಪಾಟೀಲ, ಕಿರಣ್.ಎಚ್.ಪಾಟೀಲ. ಹಾಗೂ ಶಿಕ್ಷಕರಾದ ಅಶೋಕ. ಕಟ್ಟಿ, ಎಚ್.ಬಿ.ಪಾಟೀಲ, ಸಂತೋಷ ಜಾಮಗೊಂಡಿ, ಗುಡಗುಂಟಿ, ಎಂ. ಎಸ್. ರಾಯಗೊಂಡ, ಎಸ್.ಬಿ.ಸಾಸನೂರ, ಬಿ.ಆಯ್. ಹಿರೇಹೊಳಿ, ಕಾಶಿನಾಥ ನಾಲತವಾಡ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪರಿಸರ ಜಾಗೃತಿ ಪಥಸಂಚಲನ




**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿಯ ಢಪಳಾಪೂರ ವಿದ್ಯಾ ವಿಹಾರ ಸಿಬಿಎಸ್‌ಸಿ ಶಾಲೆಯ ಮಕ್ಕಳು ಶಾಲಾ ಆವರಣದಲ್ಲಿ ಸಸಿಗಳನ್ನು ನೆಡುವದು ಮತ್ತು ಪಟ್ಟಣದಲ್ಲಿ ಪರಿಸರ ಜಾಗೃತಿ ಜಾಥಾ ನಡೆಸಿದರು.

ಪಟ್ಟಣದ ಬಸವವವೃತ್ತದಿಂದ ನಡಚೌಕಿ, ಗಾಂಧಿವೃತ್ತ, ಚನ್ನಮ್ಮ ವೃತ್ತದವರೆಗೆ ಪರಿಸರ ಜಾಗೃತಿಯ ಘೋಷಣೆಗಳನ್ನು ಕೂಗುತ್ತಾ ಜಾಗೃತಿ ಮೂಡಿಸಿದರು.ವಿಧ್ಯಾರ್ಥಿನಿಯರಾದ ಚಾರಿತ್ರ್ಯ, ಅನ್ವಿತಾ, ವಿಂಧ್ಯಾ, ಅಕ್ಷರಾ ಪರಿಸರ ಜಾಗೃತಿಯ ಭಾಷಣ ಮಾಡಿದರು. ಸ್ಥಳೀಯ ಆರಕ್ಷಕ ಠಾಣೆಯ ಪೋಲೀಸ್ ಸಿಬ್ಬಂದಿ ಮಕ್ಕಳ ಜಾಥಾಗೆ ಸಹಕರಿಸಿದರು. ಢಪಳಾಪೂರ ವಿದ್ಯಾವಿಹಾರ ಸಿಬಿಎಸ್‌ಸಿ ಶಾಲೆಯ ಆಡಳಿತ ಮಂಡಳಿಯ ಕಾರ್ಯದರ್ಶಿ ವಿವೇಕ ಢಪಳಾಪೂರ, ಪ್ರಾಚಾರ್ಯ ಲೂಯಿಸ್ ಬರೆಟ್ಟೊ, ರಾಚಯ್ಯ ಹಿರೇಮಠ, ಪ್ರಸಾದ ಬುರುಕುಲೆ, ಸುಜಾತಾ ಕೋಳಿ, ರೇಷ್ಮಾ, ಜ್ಯೋತಿ ಮಾಂಡ್ರೆ, ಮಂಜುಳಾ, ರಾಜಶ್ರೀ ಸೇರಿದಂತೆ ಹಲವರು ಇದ್ದರು.

# ಗಾಂಧಿ ಪುತ್ಥಳಿ ನಿರ್ಮಾಣದಲ್ಲಿ ಅವ್ಯವಹಾರ ಆರೋಪ ಪುರಸಭೆ ಸದಸ್ಯನಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ

**ಮಹಾಲಿಂಗಪುರ :** ಪಟ್ಟಣದ ಗಾಂಧಿವೃತ್ತದಲ್ಲಿ ಗಾಂಧಿ ಪುತ್ಥಳಿ ನಿರ್ಮಾಣದಲ್ಲಿ ಅವ್ಯವಹಾರ ನಡೆದಿದ್ದು, ತಪ್ಪಿತಸ್ಥರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಪುರಸಭೆ ಸದಸ್ಯ ರವಿ ಜವಳಗಿ ಮನವಿ ಸಲ್ಲಿಸಿದ್ದಾರೆ.

ಮಹಾಂತೇಶ ಧಡೂತಿ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದಾಗ, ವೃತ್ತ ಹಾಗೂ ಪುತ್ಥಳಿ ನಿರ್ಮಾಣಕ್ಕೆ 7.65 ಲಕ್ಷರೂ.ಟೆಂಡರ್ ಕರೆಯಲಾಗಿದೆ ಎಂದು ಪುರಸಭೆಯವರು ಮಾಹಿತಿ ಪೂರೈಸಿದ್ದಾರೆ.



ಆದರೆ, ಅದೇ ಕೆಲಸಕ್ಕೆ ಸಂಬಂಧಿಸಿದ ಗುತ್ತಿಗೆದಾರನಿಗೆ 10.68 ಲಕ್ಷ ರೂ. ಪಾವತಿಸಿದ್ದಾರೆ. ಹೀಗಾಗಿ, ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಅವರು ಆರೋಪಿಸಿದ್ದಾರೆ.

ಈಗ ಪಾವತಿಸಿರುವ 10.68 ಲಕ್ಷ ಅಲ್ಲದೇ,ಇದೇ ಕಾಮಗಾರಿಗೆ ಮತ್ತೇ 7 ಲಕ್ಷ ಖರ್ಚು ಹಾಕಲಿದ್ದಾರೆ ಎಂಬ ಮಾಹಿತಿ ಬಂದ ಕಾರಣ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇನೆ. ಹಾಲಿ ಪುರಸಭೆಯ ಆಡಳಿತಾಧಿಕಾರಿಯಾದ ಜಮಖಂಡಿ ಉಪವಿಭಾಗಾಧಿಕಾರಿಗಳು ಈ ಕುರಿತು ಸೂಕ್ತ ಪರಿಶೀಲನೆ ನಡೆಸಬೇಕು. ಗಾಂಧಿ ವೃತ್ತಕ್ಕೆ ನಿಜಾಗಿಯೂ ಎಷ್ಟು ಖರ್ಚಾಗಿದೆ.? ಪುರಸಭೆಯ ಅಧಿಕಾರಿಗಳು ಮಾಹಿತಿ ಹಕ್ಕಿನಡಿ ನೀಡಿದ ಮಾಹಿತಿ ಸತ್ಯವೋ, ಗುತ್ತಿಗೆದಾರನಿಗೆ ಪಾವತಿಸಿದ ಹಣದಷ್ಟು ಖರ್ಚಾಗಿದೆಯೋ ಎಂಬ ವಿಷಯವನ್ನು ಸಾರ್ವಜನಿಕರಿಗೆ ಬಹಿರಂಗ ಪಡಿಸಬೇಕು ಎಂದು ಪುರಸಭೆ ಸದಸ್ಯ ರವಿ ಜವಳಗಿ ಒತ್ತಾಯಿಸಿದ್ದಾರೆ.

ಇ–ಪ್ರೊಕ್ಯೂರಮೆಂಟ್ ಪ್ರಕಾರ ಟೆಂಡರ್ ಕರೆದು ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಗಿದ್ದು, ಅದರ ಪ್ರಕಾರವೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಲಾಗಿದೆ. ಇದರಲ್ಲಿ ಯಾವುದೇ ಅವ್ಯವಹಾರ ಆಗಿಲ್ಲ ಎಂದು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ತಿಳಿಸಿದ್ದಾರೆ.

# ಮೇಘಮೈತ್ರಿ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಕಟಗಿಹಳ್ಳಿಮಠರಿಗೆ ಸತ್ಕಾರ



**ಬಾಗಲಕೋಟೆ :** ರವಿವಾರ ನಗರದಲ್ಲಿ ಜರುಗುತ್ತಿರುವ ಮೇಘಮೈತ್ರಿ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಅವರಿಗೆ ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಸಾಹಿತಿ ಡಾ.ಪ್ರಕಾಶ ಖಾಡೆ ಸತ್ಕರಿಸಿ ಗೌರವಿಸಿದರು. ಶಿಕ್ಷಣ ಸಾಹಿತ್ಯ ಸಂಶೋಧನೆ ವಚನ ಅಧ್ಯಯನ ಕ್ಷೇತ್ರದಲ್ಲಿ ತಮ್ಮದೇಯಾದ ಛಾಪು ಮೂಡಿಸಿರುವ ಕಟಗಿಹಳ್ಳಿಮಠರು ನಮ್ಮ ಕನ್ನಡದ ಹಿರಿಯ ವಿದ್ವಾಂಸರು ಅವರನ್ನು ಕಮತಗಿಯ ಮೇಘಮೈತ್ರಿ ಸಂಸ್ಥೆಯ ಅಧ್ಯಕ್ಷರಾದ ರಮೇಶ ಕಮತಗಿ ಅವರು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿರುವುದು ಅಭಿಮಾನದ ಸಂಗತಿ ಎಂದು ಡಾ.ಖಾಡೆ ತಿಳಿಸಿದರು. ಈ ಸಂದರ್ಭದಲ್ಲಿ ರಮೇಶ ಕಮತಗಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ, ಜಿಲ್ಲಾ ಕಾನಿಪ ಅಧ್ಯಕ್ಷ ಆನಂದ ಧಲಬಂಜನ್, ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಮೂಗನೂರಮಠ, ಪ್ರಾಧ್ಯಾಪಕರಾದ ಡಾ.ನಾಗರಾಜ, ಡಾ.ಸಹಜಾನಂದ ಕೇಂಗಲಗುತ್ತಿ, ಡಾ.ಬಸವರಾಜ ಕುಂಬಾರ, ಕವಿ ಮುತ್ತು ಬಳ್ಳಾ, ಸಂಗಮೇಶ ಬಡಿಗೇರ ಉಪಸ್ಥಿತರಿದ್ದು.

# ಸೋಮನಾಥ ಸಜ್ಜನ ದಂಪತಿಗಳಿಗೆ ಗೌರವ ಸನ್ಮಾನ

**ಭಾಲ್ಕಿ :** ತಾಲೂಕಿನ ಉಚ್ಚಾ ಗ್ರಾಮದ ಪೂಜ್ಯ ಶ್ರೀ ದಿವ್ಯಯೋಗಿ ಶ್ರೀ ಕಂಠಯ್ಯಾ ಸ್ವಾಮಿಗಳ ಲಿಂಗಯೋಗ ಧ್ಯಾನ ಮಂದಿರದಲ್ಲಿ 10ನೆಯ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಪಾಸದ ಗ್ರಾಮದ ವಿಧ್ಯಾರ್ಥಿಗಳಿಗೆ ಗೌರವ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸವರಾಜ ವಾರದ ಹಿರಿಯರು ಉಚ್ಚ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶರಣ ಶ್ರೀ ಸೂರ್ಯಕಾಂತ ಗುಂಡಪ್ಪ ಪಾಟೀಲ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಲ್ಕಿ ಅವರು ಆಗಮಿಸಿದ್ದರು. ಶರಣ ಶ್ರೀ ನಾಗಭೂಷಣ ಮಾಮಡಿ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ ಭಾಲ್ಕಿ, ಸೋಮನಾಥ ಸಜ್ಜನಶೆಟ್ಟಿ ಶರಣರು ಉಚ್ಚ, ಅಜಿತ ಪಾಟೀಲ್ ಹೊನ್ನಳ್ಳಿ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಶರಣ ದಂಪತಿಗಳಾದ ಶ್ರೀಮತಿ ಶ್ರೀದೇವಿ ಸೂರ್ಯಕಾಂತ ಗುಂಡಪ್ಪ ಪಾಟೀಲ ದಂಪತಿಗಳಿಗೆ ಅಭಿವಂದನೆ ಗೌರವ ಸನ್ಮಾನ ಮಾಡಲಾಯಿತು. ಭಕ್ತಿ ದಾಸೋಹಿಗಳಾದ ಶ್ರೀಮತಿ ಮಹಾದೇವಿ ಸೋಮನಾಥ ಸಜ್ಜನಶೆಟ್ಟಿ ಅವರಿಗೂ ಸನ್ಮಾನ ಮಾಡಲಾಯಿತು.



ಮುಖ್ಯ ಅತಿಥಿ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಪಾಟೀಲರು ಗ್ರಾಮದ ಯುವಕರು ಮುಂದಿನ ಪೀಳಿಗೆಗೆ ಹೇಗೆ ಮಾದರಿಯಾಗಬೇಕು, ಹಿರಿಯರನ್ನು ಗೌರವಿಸುವ ಮನೋಭಾವ ಇಂದಿನ ಯುವಕರಲ್ಲಿ ಜಾಗೃತಿ ಮೂಡಬೇಕು ಎಂದು ಹೇಳಿದರು. ಭಕ್ತಿ ದಾಸೋಹಿಗಳಾದ ಶರಣ ದಂಪತಿ ಶ್ರೀಮತಿ ಮಹಾದೇವಿ ಸೋಮನಾಥ ಸಜ್ಜನ ಉಚ್ಚ ಅವರು ಗುರುಬಸವ ಪೂಜೆ ನೆರವೇರಿಸಿದರು. ವೇದಿಕೆಯ ಮೇಲಿದ್ದ ಗಣ್ಯರನ್ನು ಶಾಲು ಹೊದೆಸಿ ಸನ್ಮಾನಿಸಲಾಯಿತು. 2023–24 ನೆಯ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಗ್ರಾಮದ 17 ವಿಧ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಿ ಸನ್ಮಾನಿಸಲಾಯಿತು ಎಂದು ಶ್ರೀ ಶಾಂತಯ್ಯ ಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

# ಬಾಗಲಕೋಟೆ ಜಿಲ್ಲಾ 11 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಪುಸ್ತಕ ಮತ್ತು ಕಲಾ ಮಳಿಗೆ ನೋಂದಣಿಗೆ ಆಹ್ವಾನ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ 11ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಇದೆ ಜೂನ್ 29 ಮತ್ತು 30 ಎರಡು ದಿನಗಳ ಕಾಲ ಜರಗಲಿದ್ದು, ಸಮ್ಮೇಳನ ಸಂದರ್ಭದಲ್ಲಿ ಪುಸ್ತಕ ಮತ್ತು ಕಲಾ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದ್ದು, ಆಸಕ್ತರು ನೋಂದಣಿ ಮಾಡಿಕೊಳ್ಳಬೇಕೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪತ್ರಿಕಾ ಪ್ರಕಟನೆ ನೀಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೀಲಪ್ಪ ಗಾಣಿಗೇರ ಸಂಚಾಲಕರು, ಪುಸ್ತಕ ಮತ್ತು ಕಲಾ ಮಳಿಗೆ 11 ನೇ ಕನ್ನಡ ಸಾಹಿತ್ಯ ಸಮ್ಮೇಳನ ಬಾಗಲಕೋಟೆ ಮೊ.9448751229 ಗೆ ಸಂಪರ್ಕಿಸಲು ಕೋರಿದ್ದಾರೆ.

# ಪುಂಡಪ್ಪ ಬಸಪ್ಪ ಅಳ್ಳಿಮಟ್ಟಿ ನಿಧನ



**ಬಾಗಲಕೋಟೆ:**ಪಟ್ಟಣದನಿವಾಸಿ,ಹಳ್ಳೂರುಬಸವೇಶ್ವರ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಯರಾದ ಶ್ರೀ ಪುಂಡಪ್ಪ ಬಸಪ್ಪ ಅಳ್ಳಿಮಟ್ಟಿ (66) ದಿನಾಂಕ:07/06/2024 ರ ಶುಕ್ರವಾರದಂದು ಮುಂಜಾನೆ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ ಮತ್ತು ಅಳಿಯಂದಿರು, ಮೂರು ಜನ ಮೊಮ್ಮಕ್ಕಳು ಅಪಾರ ಬಂಧು ಬಳಗದವರು, ಶಿಷ್ಯ ವೃಂದವನ್ನು ಬಿಟ್ಟು ಅಗಲಿದ್ದಾರೆ.

# ವುಶು ಅರ್ಜುನ ಪ್ರಶಸ್ತಿ ವಿಜೇತ ಏಷಿಯನ್ ಮೆಡಲಿಸ್ಟ್ ಬಿಮಲೋಜಿತ ಸಿಂಗ್‌ಗೆ ಸನ್ಮಾನ



**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಮೇಡಕಲ್ ಕಾಲೇಜಿ ಕಛೇರಿಗೆ ಬೇಟಿ ನೀಡಿದ ಏಶಿಯನ್ ಮೇಡಲಿಸ್ಟ್ ವುಶು ಎರಡನೇ ಅರ್ಜುನ ಪ್ರಶಸ್ತಿ ವಿಜೇತ ಮಣಿಪುರದ ಬಿಮಲೋಜಿತ ಸಿಂಘ್ ಗೆ ಬಿ.ವಿ.ವಿ.ಸಂಘ ಹಾಗೂ ರಾಜ್ಯ ವುಶು ಸಂಸ್ಥೆ ಪರವಾಗಿ ಸಂಘ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಸನ್ಮಾನಿಸಿ ಗೌರವಿಸಿದರು. ಈ ಸಂಧರ್ಭದಲ್ಲಿ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾದ್ಯಕ್ಷ ಅಶೋಕ ಸಜ್ಜನ, ವುಶು ಸಂಸ್ಥೆಯ ಅಶೋಕ ಮೋಕಾಶೀ,ಸಂಗಮಶಲಾಯದಗುಂದಿಇದ್ದರು.

# ವಚನ ಸಾಹಿತ್ಯ ಪ್ರಸಾರ ಮಾಡಿದ ಗುರುಬಸವ ಮನೆಯಲ್ಲಿ ಮಹಾಮನೆ

**ರಬಕವಿ–ಬನಹಟ್ಟಿ :** ಹದಿನೈದು ವರ್ಷಗಳ ಹಿಂದೆ ಶ್ರೀಗುರು ಬಸವ ಮನೆಯಲ್ಲಿ ಮಹಾಮನೆಯ ಸೇವಾ ಹುಟ್ಟಿಕೊಂಡು ರಬಕವಿ ಬನಹಟ್ಟಿ ಭಾಗದಲ್ಲಿ ವಚನ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಮಾಡಿದ್ದು ಅತ್ಯಂತ ಸ್ತುತ್ಯ ಎಂದು ಹಾವೇರಿ ಜಿಲ್ಲೆಯ ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯ ಪೀಠದ ಜಗದ್ಗುರು ಶಾಂತಭೀಷ್ಮ ಚೌಡಯ್ಯ ಸ್ವಾಮಿಜಿ ನುಡಿದರು.

ಭಾನುವಾರ ಬನಹಟ್ಟಿಯ ಕೆ. ಎಚ್. ಡಿ. ಸಿ. ಕಾಲೊನಿಯ ವಚನ ಮಂಟಪದಲ್ಲಿ ಶ್ರೀಗುರು ಬಸವ ಮನೆಯಲ್ಲಿ ಮಹಾಮನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನರು ತಮ್ಮ ದಿನನಿತ್ಯದ ಜೀವನದಲ್ಲಿ ವಚನ ಸಾಹಿತ್ಯವನ್ನು ಓದಿಕೊಂಡು ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯುವ ಪೀಳಿಗೆಗೆ ವಚನ ಸಾಹಿತ್ಯವನ್ನು ಓದುವುದರ ಜೊತೆಗೆ ಅದನ್ನು ಪ್ರಸಾರ ಮಾಡುವ ಕಾರ್ಯವನ್ನು ಮಾಡಬೇಕು ಎಂದು ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ತಿಳಿಸಿದರು.




ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ಮಾತನಾಡಿ, ಮಹಾಮನೆ ಸೇವಾ ಸಮಿತಿಯು ವಚನ ಪೀಠ, ವಚನ ಮಂಟಪ, ವಚನ ಚಿಂತನೆ, ವಚನ ವ್ಯಾಖ್ಯಾನ, ವಚನ ಗಾಯನ, ವಚನ ಪಲ್ಲಕ್ಕಿ ಉತ್ಸವ, ಮತ್ತು ವಚನ ರಥೋತ್ಸವ ಕಾರ್ಯಕ್ರಮದ ಮೂಲಕ ಸೇವೆಯನ್ನು ಮಾಡುತ್ತಿದೆ. ವಚನಗಳ ಕುರಿತು ಚಿಂತನೆಯ ಕಾರ್ಯಕ್ರಮಗಳು ಬೇರೆ ರಾಜ್ಯಗಳು ಸೇರಿದಂತೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಚರ್ಚೆಯಾಗುತ್ತಿವೆ. ಬಸವ ಸಮಿತಿ, ಸಿರಿಗೇರಿ, ಸುತ್ತೂರ, ಬೆಳಗಾವಿಯ ನಾಗನೂರು ಮತ್ತು ಗದುಗಿನ ತೋಂಟದಾರ್ಯ ಮಠಗಳು ವಚನ ಸಾಹಿತ್ಯವನ್ನು ಇಂಗ್ಲಿಷ್ ಮತ್ತು ಬೇರೆ ಭಾಷೆಗೆ ಭಾಷಾಂತರಿಸುವಂತಹ ಮಹತ್ವದ ಕಾರ್ಯವನ್ನು ಮಾಡುತ್ತಿವೆ ಎಂದರು.

ಹಾರೂಗೇರಿ ಶರಣ ವಿಚಾರ ವಾಹಿನಿಯ ಐ. ಆರ್. ಮಠಪತಿ ಮಾತನಾಡಿ, ವಚನ ಸಾಹಿತ್ಯವನ್ನು ಉಳಿಸಿ ಬೆಳೆಸುವುದರ ಜೊತೆಗೆ ಬಡತನದಲ್ಲಿಯೂ ವಚನ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಡಾ. ಫ. ಗು. ಹಳಕಟ್ಟಿಯವರನ್ನು ನಾವು ದಿನನಿತ್ಯ ಸ್ಮರಿಸಬೇಕು. ವಚನ ಸಾಹಿತ್ಯಕ್ಕೆ ನೆಲೆಯನ್ನು ಕಟ್ಟಿಕೊಟ್ಟವರು ಡಾ. ಹಳಕಟ್ಟಿಯವರು ಎಂದು ತಿಳಿಸಿದರು.

ನಾಟಕಕಾರ ಪ್ರೊ. ಬಿ. ಆರ್. ಪೊಲೀಸಪಾಟೀಲ, ರವೀಂದ್ರ ದಳವಾಯಿ, ಅಶೋಕ ವಾಲೀಕಾರ, ಶಿವಾನಂದ ಭಸ್ಮೆ , ಮಹಾಂತ ಶರಣರು ಈ ಸಂದರ್ಭದಲ್ಲಿ ಮಾತನಾಡಿದರು.

ರವಿ ಗೆದ್ದೆಪ್ಪನವರ, ಶ್ರೀಶೈಲ ಮಡಿವಾಳರ, ಬಸವರಾಜ ಚನಾಳ, ಸುರೇಶ ಅಂಬಿ, ಶಿವಾನಂದ ಬರಗಲ್, ಬಸವಂತಪ್ಪ ಬಾಣಕಾರ, ಕಾಡಪ್ಪ ಮಳಲಿ, ಆಕಾಶ ಮುಂಡಗನೂರ, ಸುರೇಶ ಅಂಬಿ, ಅಶೋಕ ಜೋರಿ, ಮಲ್ಲಪ್ಪ ಚಿಪ್ಪಾಡಿ, ಸದಾಶಿವ ಕೋಪರ್ಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಧರ್ಮಸ್ಥಳ ಸಂಸ್ಥೆ ವತಿಯಿಂದ ಜ್ಞಾನ ವಿಕಾಸ ಕಾರ್ಯಕ್ರಮ ಅಬಲೆಯನ್ನು ಸಬಲೆ ಮಾಡಿದ ಕೀರ್ತಿ ಸಲ್ಲುತ್ತದೆ

**ತೇರದಾಳ :** ಮಹಿಳೆ ಅಬಲೆ ಅಲ್ಲ. ಬದಲಾಗಿ ಮನಸ್ಸು ಮಾಡಿದರೆ ಏನು ಬೇಕಾದರು ಸಾಧಿಸಬಹುದು ಎಂಬುದನ್ನು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಸಲ್ಲುತ್ತದೆ ಎಂದು ಸಂಸ್ಥೆಯ ತಾಲೂಕು ಯೋಜನಾಧಿಕಾರಿ ನಿಂಗಪ್ಪ ಹೇಳಿದರು.

ಇಲ್ಲಿನ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಧರ್ಮಸ್ಥಳ ಸಂಸ್ಥೆ ಹಮ್ಮಿಕೊಂಡಿದ್ದ ಜ್ಞಾನ ವಿಕಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.




ಧರ್ಮಸ್ಥಳ ಸಂಸ್ಥೆಯಿಂದ ನಾಡಿನ ಲಕ್ಷಾಂತರ ಬಡ ಕುಟುಂಬಗಳು ನೆಮ್ಮದಿಯ ಜೀವನ ನಡೆಸುವಂತಾಗಿದೆ. ನಿರ್ಗತಿಕರಿಗೆ ಬದುಕು ಕಟ್ಟಿಕೊಟ್ಟ ಧರ್ಮಸ್ಥಳ ಸಂಸ್ಥೆ ಸೇವೆ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಶಿಗ್ಗಾಂವದ ದೊಡ್ಡ ಬಸವೇಶ್ವರ ಸಾಂಸ್ಕೃತಿಕ ಕಲಾ ತಂಡದಿಂದ ಸಮಾಜದಲ್ಲಿ ಮಹಿಳೆಯ ಪಾತ್ರ, ಶೌಚಾಲಯ ಬಳಕೆ, ಬಾಲ್ಯ ವಿವಾಹ ಹಾಗೂ ನೀರಿನ ಮಹತ್ವದ ಕುರಿತು ಬೀದಿ ನಾಟಕ ಪ್ರದರ್ಶನಗೊಂಡಿತು. ತೇರದಾಳ ವಲಯ ಮೇಲ್ವಿಚಾರಕಿ ಮಹಾದೇವಿ ಪ್ರಾಸ್ತಾವಿಕವಾಗಿ ಮಾತನಾಡಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ವಲಯದಲ್ಲಿ ಕೈಗೊಂಡ ಯೋಜನೆಗಳು ಹಾಗೂ ಕಾರ್ಯಕ್ರಮ ಕುರಿತು ಮಾಹಿತಿ ನೀಡಿದರು. ಜ್ಞಾನ ವಿಕಾಸ ಸಮನ್ವಯಾಧಿಕಾರಿ ಶ್ರೀದೇವಿ, ಸೇವಾಪ್ರತಿನಿಧಿ ಪುಷ್ಪಾ ಹಜಾರೆ ಇದ್ದರು.

# ಬನಹಟ್ಟಿಯಲ್ಲಿ ವಚನ ಗ್ರಂಥ ರಥೋತ್ಸವ

**ಬನಹಟ್ಟಿ :** ಇಲ್ಲಿಯ ಕೆ.ಎಚ್.ಡಿ.ಸಿ. ಕಾಲನಿಯಲ್ಲಿ ಶ್ರೀ ಗುರುಬಸವ ಮನೆಯಲ್ಲಿ ಮಹಾಮನೆ ಸೇವಾ ಸಮಿತಿಯ ಹದಿನೈದನೇ ವಾರ್ಷಿಕೋತ್ಸವ ನಿಮಿತ್ಯ ಪ್ರತಿ ವರ್ಷದಂತೆ ಈ ವರ್ಷವೂ ವಚನ ಗ್ರಂಥ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸಂಜೆ ವಚನ ಗ್ರಂಥಗಳನ್ನು ರಥದಲ್ಲಿಟ್ಟು ಎಳೆಯುವ ವಿಶೇಷವಾದ ಆಚರಣೆ ಬನಹಟ್ಟಿಯಲ್ಲಿ ಆಚರಿಸಲಾಯಿತು. ರಥವನ್ನು ಬಸವಣ್ಣ ಭಾವಚಿತ್ರ ಹಾಗೂ ದೀಪಾಲಂಕಾರಗಳಿಂದ ಅಲಂಕರಿಸಲಾಗಿತ್ತು. ರಥೋತ್ಸವ ವೀಕ್ಷಿಸಲು ಸಾವಿರಾರು ಶರಣರು ಆಗಮಿಸಿದ್ದರು. ಕೆ.ಎಚ್.ಡಿ.ಸಿ. ಯ ವಚನ ಮಂಟಪದಿಂದ ರಥೋತ್ಸವವು ಅರ್ಧಗಂಟೆಗಳ ಕಾಲ ನಡೆಯಿತು.

ಈ ಸಂದರ್ಭದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಪೀಠದ ಜಗದ್ಗುರು ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಮಾತನಾಡಿ, ಜಗತ್ತಿಗೆ ಸಮಾನತೆಯನ್ನು ತಂದು ಕೊಟ್ಟಂಥ ಸಮಾನತೆಯ ಧರ್ಮ ವಚನ ಧರ್ಮ. ಶಿವಶರಣರು ಯಾವುದೇ ಜಾತಿಗೆ ಸೀಮಿತವಾದವರಲ್ಲ. ವಚನ ಸಾಹಿತ್ಯ ಸಕಲ ಜೀವಾತ್ಮರಿಗೆ ಒಳಿತನ್ನು ಬಯಸುವಂತಹ ಸಾಹಿತ್ಯ. ಅಂತಹ ಸಾಹಿತ್ಯವಾದ ಶಿವಶರಣರ ವಚನ ಗ್ರಂಥಗಳನ್ನು ಆರಾಧಿಸಿ, ಅಳವಡಿಸಿಕೊಂಡು, ಅವುಗಳನ್ನು ಹೊತ್ತು ಮೆರೆಸಿದರೆ ಈ ಮೂಲಕ ಭಕ್ತರಲ್ಲಿ ವಚನಗಳ ಮೇಲೆ ಭಕ್ತಿ ಶ್ರದ್ಧೆ ಹೆಚ್ಚಲಿ ಎಂಬ ಉದ್ದೇಶದಿಂದ ವಚನ ಗ್ರಂಥಗಳ ರಥೋತ್ಸವವನ್ನು ವಚನ ಜಯಘೋಷ, ವಚನ ಪಠಣದೊಂದಿಗೆ ಹಮ್ಮಿಕೊಳ್ಳಲಾಗಿದೆ ಎಂದರು.



ಮಹಾಂತ ಮಂದಾರ ಮಠದ ಮಹಾಂತದೇವರು, ಶಿವಾನಂದಬುದ್ನಿ,ಶಿವಾನಂದಬರಗಲ್,ಬಸವಂತಪ್ಪ ಬಾಣಕಾರ, ಕಾಡಪ್ಪ ಮಳಲಿ, ರವಿ ಗೆದ್ದೆಪ್ಪನವರ, ಶ್ರೀಶೈಲ ಮಡಿವಾಳರ, ಆಕಾಶ ಮುಂಡಗನೂರ, ಸುರೇಶ ಅಂಬಿ, ಪ್ರವೀಣ ಜವಳಗಿ, ಶಂಕರ ನಾಗರಾಳ, ಈರಣ್ಣ ಬಾಣಕಾರ, ಅಶೋಕ ಜೋರಿ, ಮಲ್ಲಪ್ಪ ಚಿಪ್ಪಾಡಿ, ಸದಾಶಿವ ಕೋಪರ್ಡೆ, ಬಸವರಾಜ ಚನಾಳ, ಸುನೀಲ ಕುರುಂದವಾಡ, ಚನಬಸಯ್ಯ ಪೂಜಾರಿ, ಶಂಕರ ಹೋಳಗಿ, ಹುಚ್ಚಪ್ಪ ಹೋಳಗಿ, ಶಿವಲಿಂಗಪ್ಪ ಕರಲಟ್ಟಿ, ಮಹೇಶ ಬಂಡಿಗಣಿ, ರಾಜು ಸಾರವಾಡ, ಕಾಡು ಸಿದ್ದಾಪೂರ, ಶ್ರೀಧರ ಬಾಣಕಾರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಮೋದಿ ಪ್ರಧಾನಿ: ಹರಕೆ ತೀರಿಸಿದ ಅಭಿಮಾನಿ



**ರಬಕವಿ–ಬನಹಟ್ಟಿ :** ಮೂರನೇಯ ಬಾರಿಗೆ ಪ್ರಧಾನಿಯಾಗಿ ಆಯ್ಕೆಯಾಗಲಿ ಎಂದು ಮೂರು ಲೋಕದ ಒಡೆಯ ಬಬಲಾದಿ ಸದಾಶಿವ ಅಜ್ಜನಿಗೆ ಹರಕೆ ಹೊತ್ತಿದ್ದ ಮೋದೀಜಿಯವರ ಅಪ್ಪಟ ಅಭಿಮಾನಿ ಭಾಜಪಾ ಬಾಗಲಕೋಟ ಜಿಲ್ಲಾ ಓಬಿಸಿ ಕಾರ್ಯದರ್ಶಿ ಶಿವಾನಂದ ಗಾಯಕವಾಡ ಅವರು ದೀಡ ನಮಸ್ಕಾರ ಹಾಕಿ ಹರಕೆ ತೀರಿಸಿದರು. ಈ ವೇಳೆ ಮಾತನಾಡಿದ ಶಿವಾನಂದ ಗಾಯಕವಾಡ, ಬಲಿಷ್ಠ ಭಾರತ ಕಟ್ಟುವ ನಿಟ್ಟಿನಲ್ಲಿ ನಾವು ಸದಾ ಮೋದಿ ಅವರಿಗೆ ಬೆಂಬಲವಾಗಿ ನಿಲ್ಲುತ್ತೇವೆ. ಮುಂಬರುವ ಐದು ವರ್ಷಗಳ ಕಾಲ ಮೋದೀಜಿ ಅವರ ಆಡಳಿತಕ್ಕೆ ಮತ್ತಷ್ಟು ಶಕ್ತಿ ಸಿಗಲಿ ಎಂದು ಬಬಲಾದಿ ಅಜ್ಜನಲ್ಲಿ ಕೇಳಿಕೊಂಡೆವು ಎಂದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State